ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯಉಪಾಧ್ಯಕ್ಷರೆ, ಸುರತ್ಕಲ್ ಕ್ಷೇತ್ರದ ಶಾಸಕರಾದ ಶ್ರೀ ಕುಂಬ್ಳೆ ಸುಂದರರಾವ್ ಅವರು ಅಲ್ಲಿ ನಡೆದಂಥ ಘಟನೆ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ನಾನು ಉತ್ತರಿಸುವುದಕ್ಕೆ ಏನೂ ಇಲ್ಲ. ಅವರು ಹೇಳಿರತಕ್ಕಂಥ ಅಂಶಗಳ ಬಗ್ಗೆ ನ್ಯಾಯಾಂಗ ತನಿಖೆಯವರು ವಿಚಾರ ಮಾಡುತ್ತಾರೆ.

(3) ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿಯುವುದು)

+ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ನಾನು ನನ್ನ ಭಾಷಣವನ್ನು ಮುಂದುವರಿಸುತ್ತಾ, ಈ ನೂತನ ವಿದ್ಯುತ್ ಕಾರ್ಖಾನೆಯ ಅಸ್ತಿತ್ವವೇ ನಾಶವಾಗತಕ್ಕಂಥ ಪರಿಸ್ಥಿತಿಗೆ ಹೊರಟಿರುವಾಗ ಇದನ್ನು ಉಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಮತ್ತು ಅಲ್ಲಿರತಕ್ಕಂಥ ಅಧಿಕಾರಿಯನ್ನು ಕೂಡಲೇ ಬದಲಾವಣೆ ಮಾಡಬೇಕು. ಮತ್ತು ಆ ಅಧಿಕಾರಿಯಂದ ವಿದ್ಯುತ್ ಕಾರ್ಖಾನೆ ಸಂಪೂರ್ಣವಾಗಿ ನಾಶವಾಗುವುದಕ್ಕೆ ಏನೇನು ಅವ್ಯವಹಾರಗಳು ನಡೆದಿವೆ, ಇದನ್ನು ಪರಿಶೀಲನೆ ಮಾಡುವುದಕ್ಕೆ ಸದನಸಮಿತಿಯನ್ನು ನೇಮಕ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ತೀವ್ರವಾಗಿ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಅತಿಮುಖ್ಯವಾಗಿ ಆಗಬೇಕಾದದ್ದು ಏನೆಂದರೆ-ಕನ್ನಡ ನೌಕರರನ್ನು ಹೊರಗಡೆ ವರ್ಗಮಾಡುವ ರೀತಿಯಲ್ಲಿ ಅವರೆಲ್ಲರನ್ನು ಹೊರಗಡೆಗೆ ವರ್ಗ ಮಾಡುವ ಸಂಚು ಮಾಡುತ್ತಿದ್ದಾರೆ. ಮತ್ತು ಈಕನ್ನಡ ನೌಕರರು ಬೇರೆ ರಾಜ್ಯಕ್ಕೆ ಹೋಗುವುದಿಲ್ಲವೆಂದು ಅವರಿಗೆ ಗೊತ್ತಿದೆ. ಅಂದರೆ ಆ ಕನ್ನಡ ನೌಕರರಿಗೆ ಬೇರೆ ರಾಜ್ಯದ ಭಾಷೆ ಗೊತ್ತಿಲ್ಲ. ಈ ಕನ್ನಡ ನೌಕರರನ್ನು ಬೇರೆ ರಾಜ್ಯಕ್ಕೆ ವರ್ಗಮಾಡಿದ ತಕ್ಷಣ- ನಾವು ಹೋಗುವುದಿಲ್ಲವೆಂದು ಹೇಳುತ್ತಾರೆ. ಆಗ ಅಂತಿಮವಾಗಿ ಕನ್ನಡ ನೌಕರರು ಸ್ವತಃ ನಿವೃತ್ತಿ ಆಗತಕ್ಕಂಥ ಆ ಭತ್ಯ ಏನಿದೆ ಅದನ್ನು ಕೊಡಿ ಎಂದು ಅವರೇ ಬಾಯಿ ಬಿಟ್ಟು ಕೇಳಲಿ ಎನ್ನುವ ಒಂದು ರೀತಿಯಲ್ಲಿ ಆ ನೌಕರರ ಮನಸ್ಸಿನ ಮೇಲೆ ಕೆಟ್ಟ ರೀತಿಯ ಶಿಕ್ಷೆ ಮಾಡುವುದರ ಮೂಲಕ ಅವರಿಗೆ ಅತ್ಯಂತ ನೋವನ್ನು, ಗಂಭೀರತೆಯನ್ನು ಸೃಷ್ಟಿ ಮಾಡಿ, ಒಂದು ಉತ್ತಮವಾದ ನೂತನ ವಿದ್ಯುತ್ ಕಾರ್ಖಾನೆಯನ್ನು ನಾಶ ಮಾಡುವುದಕ್ಕೆ ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿ.ಕೆ.ಘೋರೆ ಅವರು ಕೈಹಾಕಿದ್ದಾರೆ. ಇದರ ಬಗ್ಗೆ ಸಮಗ್ರವಾದ ತನಿಖೆ ಆಗಲೇ ಬೇಕು ಎನ್ನುವುದನ್ನು ಸ್ಪಷ್ಟವಾದ ಒತ್ತಾಯ ಮತ್ತು ನಿರ್ಧಾರ ವಾಗಿದೆ. ಆ ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ. ಸರ್ಕಾರ ಈ ಬಗ್ಗೆ ಹಿಂದುಮುಂದೆ ಬೀಳುವುದು ಬೇಡ. ತಾವೆಲ್ಲಾ ಯೋಚನೆ ಮಾಡಿ, ಇಂಥ ಕಾರ್ಖಾನೆಯನ್ನು ನಾವು ಮತ್ತೆ ಪಡೆಯುವುದಕ್ಕೆ ಆಗುವುದಿಲ್ಲ. ನಾವು ಇಂಥ ಕಾರ್ಖಾನೆಯನ್ನು ಪುನಃ ಕಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಈ ಕಾರ್ಖಾನೆಯನ್ನು ಉಳಿಸುವುದಕ್ಕೆ ಸರ್ಕಾರ ತೀವ್ರವಾದಂಥ ಕ್ರಮವನ್ನುಕೈಗೊಳ್ಳಬೇಕು. ಈ ಕಾರ್ಖಾನೆಯಲ್ಲಿ ಮಹಾತ್ಮ ಗಾಂಧೀಜಿಯವರಿಗೆ 'ಜೈ' ಎಂದು ಜೈಕಾರ ಹಾಕಿದರೆ ಜೈಕಾರ ಹಾಕಿದಂಥ ಕಾರ್ಮಿಕರನ್ನು ಕೆಲಸದಿಂದ ತೆಗೆಯುತ್ತಾರೆ ಎನ್ನುವುದಾದರೆ, ಈ ಘೋರೆ ಬಹುಶಃ ಅವರು ಮಹಾರಾಷ್ಟ್ರ ಕಡೆಯಿಂದ ಬಂದಿರತಕ್ಕಂಥವರು ಎಂದು ನನಗನ್ನಿಸುತ್ತದೆ. ಇವರು ಎಲ್ಲೋ ಗೂಡ್ಸ್ ಅವರ ವಂಶಕ್ಕೆ ಸೇರಿರುವಂಥ ವ್ಯಕ್ತಿ ಇರಬಹುದೆಂದು ತೋರುತ್ತದೆ. ನನ್ನ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎಂದರೆ -ಮಹಾತ್ಮ ಗಾಂಧೀಜಿಯವರ ಬಗ್ಗೆ ಜೈಕಾರ ಹಾಕಿದರೆ ಅವರನ್ನು ಕೆಲಸದಿಂದ ವಜಾ ಮಾಡುತ್ತಾರೆ ಎನ್ನುವಂಥ ಮಟ್ಟಕ್ಕೆ ಹೋಗಬೇಕಾದರೆ ಈ ಅಧಿಕಾರಿಯ

ಉದ್ಘಟನ ಎಷ್ಟು ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ನಮ್ಮ ಕನ್ನಡ ಅಧಿಕಾರಿಗಳನ್ನು ಕಾರ್ಖಾನೆಯಿಂದ ಹೊರಹಾಕಿ, ಇಲ್ಲಿ ತಂದಿರತಕ್ಕಂಥ ಬಹುತೇಕ ಅಧಿಕಾರಿಗಳು ಹೊರಗಿನವರು, ಗುತ್ತಿಗೆ ಆಧಾರದ ಮೇಲೆ ತಂದಿದ್ದಾರೆ. ಹೊರಗಿನವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದಾರೆ. ಇಲ್ಲಿ ಆ ಕಾರ್ಖಾನೆ ಬೆಳೆಯುವುದಕ್ಕೆ ನಿಜವಾಗಿ ದುಡಿಯತಕ್ಕಂಥ ನೌಕರರಿಗೆ ಏನೂ ಸೌಲಭ್ಯವಿಲ್ಲ. ಹೊರಗಿನ ಅಧಿಕಾರಿಗಳಿಗೆ ಕಾರ್ಖಾನೆಯ ಬೆಳೆವಣಿಗೆಯ ಬಗ್ಗೆ ಚಿಂತನೆ ಇಲ್ಲ. ಕಾರ್ಖಾನೆಯಲ್ಲಿ ತಯಾರಾದಂಥ ಸಾಮಾನುಗಳು, ವಸ್ತುಗಳನ್ನು ದೇಶವಿದೇಶಗಳಲ್ಲಿ ಮಾರುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಆದರೆ ಈ ವ್ಯವಸ್ಥಾಪಕ ನಿರ್ದೇಶಕ ತಾನು ಬೆಳೆಯುವುದಕ್ಕೆ ಮತ್ತು ತನ್ನ ಸುತ್ತ ತನಗೆ ಬೇಕಾದವರು ಚೆನ್ನಾಗಿ ಇರುವುದಕ್ಕೆ, ಈ ವ್ಯವಸ್ಥೆಗೆ ಹಣ ಖರ್ಚು ಮಾಡುತ್ತಿದ್ದಾರೆ. ವ್ಯವಸ್ಥಾಪಕ ನಿರ್ದೇಶಕರು ತನ್ನ ಕೊಠಡಿಯ ಪೀಠೋಪಕರಣಗಳ ಖರ್ಚಿಗೆ ಕನಿಷ್ಟ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಂಥ ದುಂಡು ವೆಚ್ಚವನ್ನು ಪರಿಶೀಲನೆ ಮಾಡಲು ಸದನ ಸಮಿತಿಯನ್ನು ಮಾಡಬೇಕೆಂದು ಹೇಳುತ್ತಾ, ನೂತನ ವಿದ್ಯುತ್ ಕಾರ್ಖಾನೆ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕು. ಅದರೆ ಜೊತೆಗೆ ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಬಗ್ಗೆ ಸಹ ಸರ್ಕಾರ ತೀವ್ರ ಗಮನಹರಿಸಬೇಕು. ಸರ್ಕಾರ ಆ ರೀತಿಯ ಯಾರೋ ಕಟ್ಟಿದಂಥ ಕಾರ್ಖಾನೆಗಳನ್ನು ಮಾರುವುದಾದರೆ ಸರ್ಕಾರದ ಕೈಗಾರಿಕಾ ನೀತಿ ಸ್ಪಷ್ಟವಾಗಿ ದಿವಾಳಿಯಾಗಿದೆ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಇನ್ನು ಮಂತ್ರಿಮಂಡಲದ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಮಂತ್ರಿಮಂಡಲವನ್ನು ಜಾಸ್ತಿ ಮಾಡಿದ್ದಾರೆ. ಹಿಂದೆ ದಿವಂಗತ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಅವರ ಅಧ್ಯಕ್ಷತೆಯಲ್ಲಿ ಒಂದು ' ಆಡಳಿತ ಸುಧಾರಣಾ ಆಯೋಗ ' ರಚನೆಯಾಗಿ ಒಂದು ರಾಜ್ಯಕ್ಕೆ ಶಾಸಕರ ಆಧಾರಗ ಮೇಲೆ ಇಷ್ಟು ಜನ ಮಂತ್ರಿಗಳು ಇರಬೇಕು ಎನ್ನುವಂಥ ಒಂದು ನಿರ್ಧಾರ ಆಗಿದೆ. ಈ ವರದಿಯನ್ನು ಅತ್ಯಂತ ಜಾಗರೂಕತೆಯಿಂದ ಬಹಳ ಪ್ರಾಮಾಣಿಕವಾಗಿ ರಾಜಕಾರಣಿಗಳ ಮುಂದೆ ಇಟ್ಟಿದ್ದಾರೆ ದಿವಂಗತ ಕೆಂಗಲ್ ಹನುಮಂತಯ್ಯನವರು ರಾಜಕಾರಣಿಗಳು ಅಲ್ಲಿ ಅವರು ರಾಜಕಾರಣಗಳ ದೈವತ್ವ ಸಮಾನಕ್ಕೆ ಏರಿದವರು. ದೈವತ್ವಕ್ಕೆ ಸಮಾನರಾಗಿರತಕ್ಕಂಥ ಒಬ್ಬ ಅತ್ಯಂತ ಸಮರ್ಥ, ದಕ್ಷ ಆಡಳಿತಗಾರರು, ಈ ವಿಧಾನಸೌಧದ ಹೊರಗಡೆ 'ಸರ್ಕಾರಿ ಕೆಲಸ ದೇವರ ಕೆಲಸ ' ಎಂದು ಬರೆಸಿರತಕ್ಕಂಥ ಉದ್ದೇಶ ಬಹಳ ಜನರಿಗೆ ಅರ್ಥವಾಗಿಲ್ಲ. ಯಾವ ಉದ್ದೇಶಕ್ಕೋಸ್ಕರವಾಗಿ 'ಸರ್ಕಾರಿ ಕೆಲಸ ದೇವರ ಕೆಲಸ ' ಎಂದು ಏಕೆ ಬರೆಸಿದರೆಂದು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ದಿವಂಗತ ಕೆಂಗಲ್ ಹನುಮಂತಯ್ಯನವರು ಬಹಳಷ್ಟು ದಿವಸ ಆಡಳಿದಲ್ಲಿ ಇಲ್ಲದೇ ಇದ್ದರೂ ಅವರು ಇತಿಹಾಸದಲ್ಲಿ ಸೇರಿಹೋದರು. ಈ ಒಂದು ವಿಚಾರದಲ್ಲಿ, 'ಆಡಳಿತ ಸುಧಾರಣಾ ಆಯೋಗ' ಏನು ಒಂದು ಗುರಿಯನ್ನು, ಸೂತ್ರವನ್ನು ಕೊಟ್ಟಿದ್ದಾರೋ ಅದನ್ನು ಮೀರಿ ಇವತ್ತು 51 ಜನ ಮಂತ್ರಿಗಳನ್ನು ಮಾಡಿರತಕ್ಕಂಥದ್ದು, ಇದು ಈ ರಾಜ್ಯಕ್ಕೆ ಬೇಕಿತ್ತೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ದಿವಂಗತ ಕೆಂಗಲ್ ಹನುಮಂತಯ್ಯನವರು ಏನು ಹೇಳಿದರು ಎಂದರೆ- ಶಾಸಕರು ಸಂಖ್ಯೆ ಎಷ್ಟು ಇದೆಯೋ ಅದರಲ್ಲಿ 10 ಮಂದಿಗೆ ಒಬ್ಬ ಮಂತ್ರಿಯಂತೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಉಪಾಧ್ಯಕ್ಷರೆ , 51 ಜನ ಮಂತ್ರಿಗಳನ್ನು ಮಾಡಿದರೂ ಸಹ ಆಡಳಿತ ಪಕ್ಷದಲ್ಲಿರುವವರಿಗೆ ಸಮಾಧಾನವಿಲ್ಲ.ಇನ್ನೂ 30 ಜನ ಶಾಸಕರಿಂದ ಮಂತ್ರಿ ಆಗಬೇಕು

ಎನ್ನುವ ಬೇಡಿಕೆ ಇದೆ. ವಿವಿಧ ಮಂಡಳಿಗಳಿಗೆ ನಿಗಮಗಳಿಗೆ ಚೇರ್‌ಮನ್‌ಗಳೆಂದು 40 ಜನರು ಇದ್ದಾರೆ. ಈ 30 ಜನರ ಗುಂಪು ಅವರು ಮಂತ್ರಿಗಳು ಆಗಲೇಬೇಕೆಂದು ಹಟಮಾಡುತ್ತಾ ಒಂದು ರೀತಿಯಲ್ಲಿ ರೋಗಗ್ರಸ್ಥರಾಗಿದ್ದಾರೆ. ನಾವು ಮಂತ್ರಿಗಳಾಗೆಲ್ಲ, ನಮಗೆ ಅನ್ಯಾಯವಾಗಿ ಹೋಯಿತು, ನಾವೆಲ್ಲಾ ಮಂತ್ರಿಗಳಾಗಲು ಕಾದಿದ್ದೆವು, ನಮ್ಮ ದಿಕ್ಕು ತಪ್ಪಿದೆ ಎಂದು ಅವರೆಲ್ಲಾ ಒಂದು ರೀತಿಯಲ್ಲಿ ಕೊರಗುತ್ತಿದ್ದಾರೆ. ಹಾಗೆಯೇ ಇನ್ನು ಕೆಲವು ಮಂತ್ರಿಗಳಿಗೆ ತಮ್ಮ ಇಲಾಖೆಗಳು ಬದಲಾವಣೆ ಆಗಿಹೋಯಿತು ಎಂದು ಅವರಿಗೆ ಬೇರೆಯದೇ ದುಃಖ ಅವರು ಬದುಕುವ ಹಾಗಿಲ್ಲ ಅಥವಾ ಉಳಿಯುವ ಹಾಗಿಲ್ಲ ಇಂಥ ಪರಿಸ್ಥಿತಿ ಅವರಿಗೆ ನಿರ್ಮಾಣವಾಗಿದೆ. ಇದರಲ್ಲಿ ಕೆಲವರು ಗಟ್ಟಿಕುಳಗಳು. ಅಂಥವರನ್ನು ಏನೂ ಮಾಡುವುದಕ್ಕೆ ಆಗಿಲ್ಲ, ಕೆಲವು ಮಂತ್ರಿಗಳಿಗೆ ಮೊದಲಿನ ಇಲಾಖೆಯೊಂದಿಗೆ ಹೆಚ್ಚಿಗೆ ಇಲಾಖೆಗಳನ್ನು ಕೊಟ್ಟರೆ, ಇನ್ನು ಕೆಲವರಿಗ ಇದ್ದ ಇಲಾಖೆಯನ್ನು ಕಿತ್ತು ಬೇರೆಯವರಿಗೆ ಕೊಟ್ಟಿದ್ದಾರೆ. ಇನ್ನ ಕೆಲವರುಗೆ ಯಾವುದೇ ಖಾತೆ ಇಲ್ಲದೆಯೇ ಮಂತ್ರಿಯಾಗಿದ್ದಾರೆ. ಹೆಚ್ಚಿಗೆ ಇಲಾಖೆಗಳನ್ನು ವಹಿಸಿಕೊಟ್ಟಿರುವುದಕ್ಕೆ ಬಹುಶಃ ಅವರು ದಕ್ಷತೆಯಿಂದ ಕೆಲಸ ಮಾಡಿರಬಹುದು ಮತ್ತು ಇನ್ನು ಏನೇನೋ ಕಾರಣಗಳು ಇರಬಹುದು.

ಶ್ರೀ ಮಲ್ಲಿ ಕಾರ್ಜುನ ಖರ್ಗೆ: ನೀವು ಹೇಳುತ್ತಿರುವ ಮಂತ್ರಿಮಂಡಲದಲ್ಲಿ ಗಟ್ಟಿ ಕುಳಗಳು ಯಾರ್ಯಾರು ಎಂದು ಹೇಳಿ.

ಶ್ರೀ ವಾಟಾಳ್ ನಾಗಾರಜ್: ನಮ್ಮ ಖರ್ಗೆಯವರು ಗ್ರಾಮಾಫೋನ್ ತರಹ ಆಡಿದ್ದೇ ಆಡುತ್ತಾರೆ, ಅವರು ಯಾವತ್ತೂ ರೆಕಾರ್ಡ್ ಬಿಟ್ಟು ಮುಂದೆ ಹೋಗುವುದಿಲ್ಲ. ನಾವು ಅದನ್ನು ಕೇಳಿ ಪ್ರೀತಿಯಿಂದ ಸ್ವೀಕಾರ ಮಾಡುತ್ತೇವೆ. ಅವರು ನಮ್ಮ ವಿರೋಧ ಪಕ್ಷದ ನಾಯಕರು, ಅದರ ಬಗ್ಗೆ ನಮಗೆ ಅಪಾರ ಗೌರವವಿದೆ. ಅದರ ಬಗ್ಗೆ ನನ್ನ ತಕರಾರೇನೂ ಇಲ್ಲ. ಅವರು ಹೇಳಲಿ. ಒಟ್ಟು 51 ಜನ ಮಂತ್ರಿಗಳಿದ್ದು, ಡೆಲ್ಲಿಯಲ್ಲಿರುವವರು ಮತ್ತು ಇತ್ತೀಚೆಗೆ ಸ್ಥಾನ ಸಿಕ್ಕದವರನ್ನೂ ಸೇರಿಸಿ 53 ಜನರಾಯಿತು. ಇನ್ನೂ 30 ಜನ ಸದಸ್ಯರು ಮಂತ್ರಿ ಸ್ಥಾನಕ್ಕಾಗಿ ಕಾದಿದ್ದಾರೆ. ಒಂದು ಸಾರಿ, ಆಗ ಶ್ರೀ ಜೆ.ಹೆಚ್ ಪಟೇಲರೂ ಇದ್ದರು, ನಾವು ಶ್ರೀ ಶಾಂತವೇರಿ ಗೋಪಾಲ ಗೌಡರನ್ನು ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡೆವು. ಅವರಿಗೆ ನಾವೇನು ಸಲಹೆಯನ್ನು ಕೊಟ್ಟವೆಂದರೆ, ತಾವು ಮನೆಗೆ ಹೋಗಬೇಡಿ, ಸರ್ಕಾರಿ ಕಾರನ್ನು ಉಪಯೋಗಿಸಿಕೊಳ್ಳಬೇಡಿ, ಮಂತ್ರಿಮಂಡಲ ಬಹಳ ದಿವಸ ಉಳಿಯುವುದಿಲ್ಲ. ಅಲ್ಲಿಗೆ ಹೋಗುವುದು ಬೇಡವೆಂದು ಹೇಳಿ ಮಂತ್ರಿಗಳ ಸಂಖ್ಯೆನ್ನು 80ಕ್ಕೇರಿಸುವುದು. ಆಗ ಅವಿಶ್ವಾಸವನ್ನೇ ತರಬಾರದು ಆ ರೀತಿ ಮಾಡಬೇಕೆಂಬ ಸಲಹೆ ಇತ್ತು. ನಮ್ಮ ಶಾಸಕರ ಭವನಕ್ಕೆ, ಶಿವಮೋಗ್ಗದವರೂ ಕೋಣಂದೂರು ಲಿಂಗಪ್ಪನವರೂ ಎಲ್ಲರೂ ಬಂದರು.

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲಿ ಮಂತ್ರಿಮಂಡಲವಾಗುತ್ತದೆಂದು ವಾಪಸ್ಸು ಇಲ್ಲಿಗೆ ಬಂದರು.

ಶ್ರೀ ವಾಟಾಳ್ ನಾಗರಾಜ್: ನಿಮ್ಮನ್ನೂ ಮಂತ್ರಿಗಳನ್ನಾಗಿ ಮಾಡುತ್ತೇವೆ. ಆ ಕಡೆಗೆ ಹೋಗಬೇಡಿ ಎಂದು ಹೇಳಿ ನಾನು 12 ಜನರನ್ನು ಕರೆದುಕೊಂಡು ಬಂದೆ. ಅವರೊಲ್ಲಬ್ಬರು ದಿವಂಗತ ಶ್ರೀ ಎಲ್.ಶ್ರೀಕಂಠಯ್ಯನವರು. ಅವರು ಬಹಳ ಪಾಂಡಿತ್ಯ ಹೋಂದಿದವರು. ನಾನು ವರ ಮನೆಗೆ ಹೋಗಿ, ಶ್ರೀಕಂಠಯ್ಯನವರೇ ತಾವು ಎಲ್ಲಿಗೂ ಹೋಗಬೇಡಿ, ನಿಮ್ಮನ್ನೂ ವಿದ್ಯಾ ಇಲಾಖೆಯ ಮಂತ್ರಿಗಳನ್ನಾಗಿ ಮಾಡಬೇಕೆಂದಿದ್ದೇವೆಂಬ ಸಲಹೆಯನ್ನು ನಾನು ಅವರಿಗೆ ಕೊಟ್ಟೆ. ಅವರು ಏನೋ,

ನನಗಿಂದ ದಕ್ಷರು ಇನ್ನೊಬ್ಬರಾರಿದ್ದಾರೆಂದು ಹೇಳಿದರು. ಅದಕ್ಕೋಸ್ಕರವೇ ನಾನು ನಿಮ್ಮ ಬಳಿ ಬಂದಿದ್ದೇನೆಂದುಹೇಳಿದೆ. ಏಕೆಂದರೆ, ನಾನು ತಮಗೆ ಕಥೆ ಹೇಳುತ್ತೇನೆ. ಅವತ್ತಿನ ನೆನಪುಗಳಿವೆ. ಒಂದು ಇತಿಹಾಸವೇ ಆಯಿತದು. ಶಾಸಕರ ಭವನದ ಮೊದಲ ಮಹಡಿಯ ರೂ.ನಂ.27 ಶ್ರೀ ಶಾಂತವೇರಿ ಗೋಪಾಲಗೌಡರದ್ದು. ಅವರ ಸಹಪಾಠಿ ನಮ್ಮ ಪುಟ್ಟದಾಸರು. ಆಮೇಲೆ, ನನ್ನನ್ನೂ ಮಂತ್ರಿಯನ್ನಾಗಿ ಮಾಡಿತ್ತೇವೆಂದು ಹೇಳಿದರು. ಈ ಸರ್ಕಾರವನ್ನು ಉರುಳಿಸಲು ಹೋದವರಾರೆಂದರೆ, ನಮ್ಮ ನಂಜೇಗೌಡರು. ಅದೇ 5 ಸೈನ್ ಹಾಕಿ 20 ಆಯಿತೆಂದು ಬರೆಸಿಕೊಂಡು 85-90 ಎಂದು ಅನ್ನಿಸಿ ಬಿಟ್ಟರು ನೋಡಿ ಎಂದು ಅರಸುರವರ ಕಾಲದಲ್ಲಿ ಅವರು ಗುಟ್ಟಾಗಿ ನನ್ನ ಬಳಿ ಬಂದು, ನಿನಗೆ ಮಂತ್ರಿಸ್ಥಾನ ಕೊಡುವುದು ಗ್ಯಾರೆಂಟಿ, ಏನಾದರೂ ಮಾಡಿ ಪೋಲೀಸ್ ಖಾತೆ ತೆಗೆದುಕೊಳ್ಳಬೇಕೆಂದು ನನಗೆ ಹೇಳಿ ಹೋದರು. ಪೋಲೀಸ್ ಮಂತ್ರಿಯೂ ಇಲ್ಲ. ಪೋಲೀಸ್ ಕಾನ್‌ಸ್ಟೇಬಲ್ ಇಲ್ಲ, ಪೋಲೀಸ್ ಸ್ಟೇಷನ್ನೂ ಇಲ್ಲ. ಕೊನೆಗೆ, ಆ ಮಂತ್ರಿಮಂಡಲ ಫಜೀತಿ ಎದ್ದು ಹೋಯಿತು. ನಾನೇಕೆ ಹೇಳುತ್ತಿದ್ದೇನೆಂದರೆ, 51 ಮಂತ್ರಿಗಳಿದ್ದು, ನನ್ನ ಭವಿಷ್ಯದ ಪ್ರಕಾರ ಇನ್ನೂ 30 ಜನರಿಗೆ ಮಂತ್ರಿ ಸ್ಥಾನ ಕೊಟ್ಟೇ ಬಿಟ್ಟರೆಂದು ಕೊಳ್ಳಿ, ಅವರಿಗೆ ಯಾವ ಖಾತೆಗಳನ್ನು ಕೊಡುವುದು? ಇದೊಂದು ಚಿಂತನೆ ಮಾಡಬೇಕಾಗಿದೆ. ಇದರಲ್ಲಿ ಒಬ್ಬ ಮಂತ್ರಿ ಶ್ರೀ ಅನಂತನಾಗ್‌ರವರಿದ್ದಾರೆ ಅವರು ಮುಖ್ಯಮಂತ್ರಿಗಳಿಗೆ ಹೊಂದಿಕೊಂಡಂತೆ ಎಂದಿದೆ. ಇದು ಯಾವ ಖಾತೆ? ಜೊತೆಗೆ ಎಂದರೆ ಷರ್ಟಾ, ಪ್ಯಾಂಟಾ? ಶ್ರೀ ತಿಮ್ಮಪ್ಪನವರೇ, ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಮುಖ್ಯಮಂತ್ರಿಗಳಿಗೆ ಹೊಂದಿಕೊಂಡಂತೆ ಎಂದರೆ, ಯಾವ ಸಂಬಂಧ,? ಯಾವ ವಿಚಾರ? ಏನು ಸಂಬಂಧಪಟ್ಟದ್ದು?

ಶ್ರೀ ಕಾಗೋಡು ತಿಮ್ಮಪ್ಪ: ಅದಕ್ಕಿಂತ ದೊಡ್ಡ ಹೆಸರು, ಅದಕ್ಕಿಂತ ಅಪಾರ ಕೀರ್ತಿ ಏನು ಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಷ್ಟು ಬಹಿರಂಗವಾಗಿ ಮುಖ್ಯಮಂತ್ರಿಗಳಿಗೆ ಹೊಂದಿಕೊಂಡಂತೆ ಎಂದರೆ ಏನರ್ಥ?

ಶ್ರೀ ಯು.ಆರ್. ಸಭಾಪತಿ: ಸಂಸದೀಯ ವ್ಯವಹಾರಗಳ ಸಚಿವರು ಇಲ್ಲೇ ಇದ್ದಾರೆ. ಅವರು ಇದನ್ನುಕ್ಲಾರಿಫೈ ಮಾಡಿದರೆ ಒಳ್ಳೆಯದು.

ಶ್ರೀ ವಾಟಾಳ್‌ನಾಗರಾಜ್: ಅವರನ್ನು ಕರೆಯಬೇಡಿ.

ಶ್ರೀ ಎಂ.ಸಿ. ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು): ಇದೇನೂ ಹೊಸ ಸಂಪ್ರದಾಯವಲ್ಲ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯಗಳಲ್ಲೂ, ಕೇಂದ್ರದಲ್ಲೂ ಇದು ನಡೆದುಕೊಂಡು ಬಂದಿದೆ. ಒಂದು ಕಾಲದಲ್ಲಿ ನಮ್ಮ ರಾಷ್ಟ್ರದ ಪ್ರಧಾನಿಗಳಾಗಿದ್ದ ಶ್ರೀ ಲಾಲ್‌ಬಹಾದ್ದೂರ್ ಶಾಸ್ತ್ರಿಯವರೂ ಸಹ ಖಾತೆರಹಿತ ಮಂತ್ರಿಗಳಾಗಿದ್ದರು.

ಶ್ರೀ ವಾಟಾಳ್ ನಾಗರಾಜ್: ಅವರು ಪ್ರಧಾನಿಗಳಿಗೆ ಹೊಂದಿಕೊಂಡಂತೆ ಎಂದು ಇರಲಿಲ್ಲ.

SRI M.C. NANAIAH: A Minister without portfolio, namely ಪ್ರಧಾನಿಗಳು ಏನೆಲ್ಲಾ ಹೇಳುತ್ತಾರೋ, ಆ ಕೆಲಸವನ್ನು ಮಾಡುವುದಕ್ಕೆ ಶಾಸ್ತ್ರಿಯವರಿಗೆ ಅದನ್ನು ಕೊಟ್ಟಿದ್ದು, ಅಂದರೆ, ಅವರಿಗೆ ಯಾವ ಖಾತೆಯೂ ಇಲ್ಲ. Likewise, whatever the direction the Chief Minister gives, he has got a right to do that.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿಯ ಲಾಲ್‌ಬಹಾದ್ದೂರ್ ಶಾಸ್ತ್ರಿ, ಎಲ್ಲಿಯ ಅನಂತನಾಗ್? ಎಲ್ಲಿಂದೆಲ್ಲಿಗೆ ಸಂಬಂಧ? ಎಲ್ಲಿಗೆ ನೀವು ತೆಗೆದುಕೊಂಡು ಹೋಗುತ್ತಿದ್ದೀರಿ ? ಶ್ರೀ ಜವಾಹರಲಾಲ್ ನೆಹರೂರವರು ಪ್ರಧಾನಿಗಳಾಗಿದ್ದಾಗೆ, ಅವರ ಎತ್ತರಕ್ಕೊಬ್ಬರು ಖಾತೆ ರಹಿತ ಮಂತ್ರಿಗಳಿರಲಿ ಎಂದಿರಬಹುದು.

ಶ್ರೀ ಎಂ.ಪಿ .ಪ್ರಕಾಶ್(ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು) : ಖಾತೆರಹಿತ ಮಂತ್ರಿಗಳು ಕೇವಲ ನೆಹರೂರವರ ಕಾಲದಲ್ಲಿರಲಿಲ್ಲ. ಬೇರೆ ಕಾಲದಲ್ಲೂ ಇದ್ದರು. ಇಲ್ಲಿ ಮುಖ್ಯಮಂತ್ರಿಗಳಿಗೆ ಹೊಂದಿಕೊಂಡಂತೆ ಎಂದರೆ, ಮುಖ್ಯಮಂತ್ರಿಗಳು ನಿರ್ವಹಿಸುವ ಎಲ್ಲಾ ಖಾತೆಗಳಿಗೂ ಅವರು ಸಹಾಯಕ ಮಂತ್ರಿಗಳಾಗಿರುತ್ತಾರೆ . ಮಾನ್ಯ ಸಂಸಂದೀಯ ಸಚಿವರು ಹೇಳಿದಂತೆ, ಯಾವ್ಯಾವ ಕೆಲಸಗಳನ್ನು ನಿರ್ವಹಿಸಲು ಅವರಿಗೆ ಜವಾಬ್ದಾರಿಯನ್ನು ಕೊಟ್ಟಿರುತ್ತಾರೋ, ಅದನ್ನು ಕೂಡ ಅವರು ನಿರ್ವಹಿಸಬೇಕಾಗುತ್ತದೆ. ಅದನ್ನು ಅನ್ಯಥಾ ಭಾವಿಸುವ ಅಗತ್ಯವಿಲ್ಲ.

ಶ್ರೀ ವಾಟಾಳ್‌ನಾಗರಾಜ್: ಈ ರೀತಿ ನಾವು ಭಾವಿಸಿಕೊಂಡೇ ಇಲ್ಲ. ಅದನ್ನು ನೀವು ಬಹಳ ವಿಶಾಲವಾಗಿ ಹೇಳಿದಿರಿ. ಅವರು ತೆರೆಮರೆಯಲ್ಲಿ ಹೇಳಿದರು. ಅನ್ಯಥಾ ಭಾವಿಸಿಕೊಳ್ಳಲು ಏನಿದೆ? ಮಂತ್ರಿಮಂಡಲದ ಪಟ್ಟಿ ತರಿಸಿದಾಗ, ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತೆ ಎಂದು ಅದರಲ್ಲಿದೆ. ಇದು ಯಾವ ಖಾತೆ? ಸಂಬಂಧಪಟ್ಟ ವಿಚಾರಗಳಾವುವು? ಇಲಾಖೆ ವಿಷಯಕ್ಕೆ ಬಂದರೆ, ಗೃಹ ಇಲಾಖೆ ಅದಕ್ಕೆ ಯಾವುವು ಬರುತ್ತದೆ, ಬಂದೀಖಾನೆ, ಸಕ್ಕರೆ, ಜವಳಿ ಮುಂತಾದ ಖಾತೆಗಳಿವೆ. ಇದಕ್ಕೇನಾದರೂ ಆಧಾರ ಬೇಕಲ್ಲವೇ? ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತೆ ಅಂದರೆ. ಯಾರು ಏನಾದರೂ ತಿಳಿದುಕೊಳ್ಳಬಹುದೆ? ಅವರ ಖಾತೆಗಳಿಗಾ? ಅವರು ಎಲ್ಲಾ ಖಾತೆಗಳಿಗಾ?

ಶ್ರೀ ಎಂ.ಸಿ. ನಾಣಯ್ಯ: ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತೆ ಯಾವ್ಯಾವ ಖಾತೆಗಳಿವೆ, ಉದಾ: ಡಿಪಿಎಆರ್, ಎಕ್ಸೈಸ್ under the direction of the Chief Minister, he works.

ಶ್ರೀ ಕಾಗೋಡು ತಿಮ್ಮಪ್ಪ: ಹಾಗಾದರೆ ಒಂದು ಕೆಲಸ ಮಾಡೋಣ. ಮುಖ್ಯಮಂತ್ರಿಗಳ ಕಛೇರಿ ಇದೆ, ಅದರಲ್ಲಿ ಒಂದು ಭಾಗವನ್ನು ಕೊಟ್ಟು ಅಲ್ಲಿಯೇ ಅವರನ್ನು ಕೂರಿಸಿದರೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್: ನಾವು ಹೋಗಿ ಏನು ಮಾಡುವುದು? ಎಲ್ಲಾ ಅರ್ಜಿಗಳನ್ನು ತೆಗೆದುಕೊಂಡು ಅವರ ಹತ್ತಿರ ಹೋಗಬೇಕಾಗುತ್ತದೆ. ಅವರು ಸಿಕ್ಕಬೇಕಲ್ಲವೇ?

SRI M.C. NANAIAH: He is attached to the chief Minister.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ಅಟ್ಯಾಚ್ ಮಾಡಿ, ಈ ಕಡೆ ಮುಖ್ಯಮಂತ್ರಿಗಳ ಟೇಬಲ್, ಖುರ್ಚಿ, ಆ ಕಡೆ ಅವರಿಗೆ ಸ್ಥಾನ.

ಶ್ರೀ ಎಂ.ಸಿ. ನಾಣಯ್ಯ: ನಾವೇನಾದರೂ ಮಾಡಿಕೊಳ್ಳುತ್ತೇವೆ. ನಿಮಗೇಕೆ ಅದರ ತಲೆ ನೋವು? ಅದನ್ನು ನಾವು ಮಾಡುತ್ತೇವೆ. ಅಟ್ಯಾಚ್ ಅದರೂ ಮಾಡಿಕೊಳ್ಳುತ್ತೇವೆ. ಡಿಟ್ಯಾಚ್ ಅದರೂ ಮಾಡಿಕೊಳ್ಳುತ್ತೇವೆ ನಿಮಗೇನು?

ಶ್ರೀ ಸಿ.ಎಂ. ಲಿಂಗಪ್ಪ: ಆಡಳಿತದ ಅನುಕೂಲದ ದೃಷ್ಟಿಯಿಂದ ಪಕ್ಕದಲ್ಲೇ ಕೂರಿಸಿ.

ಶ್ರೀ ವಾಟಾಳ್‌ನಾಗರಾಜ್: ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ತಕರಾರು ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀ ನಾಣಯ್ಯನವರಿಗೆ ನಾನು ಹೇಳುವುದೇನೆಂದರೆ, ತಾವು ಸಂಸದೀಯ ಸಚಿವರಾಗಿ ಖಾತೆಗಳ ಬಗ್ಗೆ ಸ್ವಲ್ಪ ಹೇಳಿ. ಯಾವುದಾದರೊಂದು ಖಾತೆ ಹೆಸರು ಹೇಳಿ. ನಿಮ್ಮ ಹಣೆಬರಹ. ನನಗನ್ನಿಸುತ್ತದೆ, ಶ್ರೀ ವರದೇಗೌಡರು ಉದ್ಯೋಗ ಮತ್ತು ತರಬೇತಿ ಖಾತೆಯಲ್ಲಿದ್ದರು. ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆಯೇ?

ಶ್ರೀ ಕೆ.ಎನ್.ನಾಗೇಗೌಡ : ಒಪ್ಪಿಕೊಳ್ಳಬೇಕೆಂದೇನಿಲ್ಲ

ಶ್ರೀ ವಾಟಾಳ್‌ನಾಗರಾಜ್: ನಾಗೇಗೌಡರು ಒಪ್ಪಿಕೊಳ್ಳಬೇಕೆಂದಿಲ್ಲವೆಂದು ಹೇಳುತ್ತಿದ್ದಾರೆ. ಅವರು ಇದ್ದರೆ ಇರಬಹುದು, ಇಲ್ಲದಿದ್ದರೆ ಹೋಗಬಹುದು. ಲೆಕ್ಕದಲ್ಲಿ ಅವರು ಹೋಗಿದ್ದಾರೆಯಾ ಬಂದಿಲ್ಲ. ಅವರ ಪರಿಸ್ಥಿತಿ ಯಾವ ತರಹವಿದೆ ನೋಡಿ. ಎಲ್ಲಿಗೆ ಹೋಗಿದ್ದಾರೆಂದು ಬಂದಿಲ್ಲ. ಅವರ ಪರಿಸ್ಥಿತಿಯಾವ ತರಹವಿದೆ ನೋಡಿ. ಎಲ್ಲಿಗೆ ಬಂದಿದೆ ನೋಡಿ. ತ್ರಿಶಂಕು ಸ್ವರ್ಗವೇ? ಭೂಲೋಕದಲ್ಲಿ ಇದ್ದಾರೆಯೇ? ಮೇಘಲೋಕದಲ್ಲಿದ್ದಾರೆಯೇ? ನನಗೆ ರೇಷ್ಮೆ ಖಾತೆ ಕೊಟ್ಟಿಲ್ಲವೆಂದು, ಬರುವುದಿಲ್ಲವೆಂದು ಹೊರಟುಹೋಗಿದ್ದಾರೆ. ಈ ಕಡೆ ರಾಜೀನಾಮೆ ತೆಗೆದುಕೊಂಡಿಲ್ಲ, ಆ ಕಡೆ ಅವರು ಬಂದೂ ಇಲ್ಲ. ಆದ್ದರಿಂದ, ಅದಕ್ಕೆ ಸಂಸದೀಯ ಸಚಿವರಾಗಿ ತಮ್ಮ ವಿಶ್ಲೇಷಣೆ ಏನು? ಅವರು ಬರುತ್ತಾರೋ ಇಲ್ಲವೋ?

ಶ್ರೀ ಎಂ.ಸಿ. ನಾಣಯ್ಯ: ಅವರು ಮಂತ್ರಿಗಳಾಗಿದ್ದಾರೆ, ಅವರುಗೊಂದು ಖಾತೆ ಕೊಡಲಾಗಿದೆ, ಅವರು ಮಂತ್ರಿಗಳೂ ಹೌದು, ಕೊಟ್ಟಿರುವ ಖಾತೆ ಅವರ ಕೈಯಲ್ಲಿರುವುದೂ ಹೌದು. ಅವರು ಬಂದಿಲ್ಲ, ಬರದಿದ್ದರೆ, ಏನು ಮಾಡುವುದು, ಬರುತ್ತಾರೋ, ಇಲ್ಲವೋ ಎಂಬುದು ಆ ಮಂತ್ರಿಗಳಿಗೂ, ಮುಖ್ಯಮಂತ್ರಿಗಳಿಗೂ ಬಿಟ್ಟ ವಿಚಾರ.

ಶ್ರೀ ಕೆ.ಎಸ್. ಈಶ್ವರಪ್ಪ: ನಮಗೆ ಖಾತೆ ರಹಿತ ಮಂತ್ರಿಗಳಿದ್ದರೆ ನಮ್ಮದೇನೂ ಆಭ್ಯಂತರವಿಲ್ಲ. ದಯವಿಟ್ಟು ಕ್ಯಾತೆರಹಿತ ಮಂತ್ರಿಗಳಿರುವ ಹಾಗೆ ಮಾಡಿ. ಕ್ಯಾತೆರಹಿತ ಮಂತ್ರಿಗಳಾಗಿರುತ್ತಾರೆಂದರೆ, ಈ ಸಮಸ್ಯೆ ಉದ್ಭವವಾಗುವುದು.

ಶ್ರೀ ವಾಟಾಳ್‌ನಾಗರಾಜ್: ಅದು ಆ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು, ಯಾವ ಖಾತೆ ಕೊಡಬೇಕೆನ್ನುವ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಸದನದ ಸದಸ್ಯನಾಗಿ ನಾನು ಹೇಳುವುದಾದರೆ, ಸದನ ನಡೆಯುವಂತಹ ಸಂದರ್ಭದಲ್ಲಿ ಸದನ ಆರಂಭವಾದಗಿನಂದ ಇಲ್ಲಿಯವರೆಗೆ ಆ ಮಂತ್ರಿಗಳು ಖಾತೆ ಬದಲಾವಣೆ ಆದಾಗಿನಿಂದ ಇಲ್ಲಿಗೆ ಬಂದಿಲ್ಲ. ಇವರು ಏಕೆ ಬರಲಿಲ್ಲ? ಇದಕ್ಕೇನು ಕಾರಣ? ಎದು ಕೇಳುವ ಅಧಿಕಾರ ನಮಗಿಲ್ಲವೆ? ನಾವು ಕೇಳಲೇಬೇಕಾಗಿದೆ. ಇದಕ್ಕೇನು ಕಾರಣ ಎಂದು ಮಾನ್ಯ ಸಂಸದೀಯ ಸಚಿವರು ಇಲ್ಲಿರುವುದರಿಂದ ಅವರು ಸಮಜಾಯಿಸಿ ಕೊಡತಕ್ಕದ್ದು, ನಾನು ಇದರ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ತಾವು ಯಾವ ಯಾವ ಇಲಾಖೆಗಳನ್ನು ಮಾಡಬಹುದು ಎನ್ನುವುದರ ಬಗ್ಗೆ ಹೇಳುತ್ತೇನೆ. ಈಗಿರತಕ್ಕಂಥ ಮುಜರಾಯಿ ಇಲಾಖೆಯನ್ನು ಬೇರ್ಪಡಿಸಿ, ಈ ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಮಂಗಳಾರತಿಗೆ ತಟ್ಟೆ ಕಾಸು ಜಾಸ್ತಿ ಬರುತ್ತಿರುತ್ತದೆ.

ಆದ್ದರಿಂದ ಒಂದು ಮಂಗಳಾರತಿ ಇಲಾಖೆ ಎಂದು ಮಾಡಿ ಇದಕ್ಕೊಬ್ಬ ಮಂಗಳಾರತಿ ಸಚಿವರು ಎಂದು ನೇಮಿಸಿ, ಸಚಿವರು, ಮಂಗಳಾರತಿ ಇಲಾಖೆ ಎಂದು ನಾಮಫಲಕ ಹಾಕಿಬಿಡಿ. ಮುಜರಾಯಿಯಲ್ಲಿ ಸಾಮಾನ್ಯವಾಗಿ ಕಟ್ಟಡಗಳು, ದೇವಸ್ಥಾನದ ಜೀರ್ಣೋದ್ಧಾರ ಇವುಗಳು ಒಂದಾದರೆ ಮತ್ತೊಂದು ಈ ಮಂಗಳಾರತಿ ಎನ್ನುವುದು ಬಹಳ ಪವಿತ್ರವಾದುದು ಹಾಗೂ ದೇವಸ್ಥಾನದಲ್ಲಿ ಕಬ್ಬಿಣದ ಪೆಟ್ಟಿಗೆ ಇರುತ್ತದೆ ಇದಕ್ಕೆ ''ಹುಂಡಿ'' ಎಂದುಕರೆಯುತ್ತಾರೆ ಆದ್ದರಿಂದ ಮಂಗಳಾರತಿಗೊಬ್ಬ ಮಂತ್ರಿಗಳನ್ನು ಮಾಡಬೇಕು. ಇದು ನನ್ನ ಸಲಹೆ ತಾವು ಇದರ ಬಗ್ಗೆ ಯೋಚನೆ ಮಾಡಿ. ನಂತರ ಈ ಗೃಹ ಇಲಾಖೆಯನ್ನು ಬೇರ್ಪಡಿಸಿ ಲಾಕಪ್‌ಗೆ ಒಬ್ಬ ಮಂತ್ರಿಯನ್ನಾಗಿ ಮಾಡಿಬಿಡಿ. ಏಕೆಂದರೆ ಗೃಹಸಚಿವರು ಎಲ್ಲವನ್ನೂ ನೋಡಿಕೊಳ್ಳುವುದಕ್ಕೆ ಕಷ್ಟವಾಗುವುದರಿಂದ ಲಾಕಪ್‌ನ್ನು ಬೇರೆ ಮಾಡಿ ಇದಕ್ಕೆ ಒಬ್ಬ ಮಂತ್ರಿಯನ್ನಾಗಿ ಮಾಡಬೇಕು. ಈಗಾಗಲೇ ಬಂಧೀಖಾನೆಗೊಬ್ಬ ಮಂತ್ರಿಯನ್ನಾಗಿ ಮಾಡಿರುತ್ತೀರಿ ಇದರಂತೆ ಲಾಕಪ್‌ಗೊಬ್ಬ ಮಂತ್ರಿಯನ್ನಾಗಿ ಮಾಡಿ ಇವರು ಎಲ್ಲದರೂ ಇರಲಿ ಒಟ್ಟಿನಲ್ಲಿ ಕೆಲಸ ಮಾಡಲಿ. ನಂತರ ಈ ಅಬಕಾರಿ ಇಲಾಖೆಯನ್ನು ಬೇರ್ಪಡಿಸಿ, ಇದರಲ್ಲಿ ನೇರವಾಗಿ ನಡೆಯುವ ಅಬಕಾರಿ ವ್ಯವಸ್ಥೆ ಮತ್ತೊಂದು ಕಳ್ಳಭಟ್ಟಿ ವ್ಯವಸ್ಥೆ. ಈ ಕಳ್ಳಭಟ್ಟಿಯನ್ನು ಪತ್ತೆ ಹಚ್ಚಿ ಇದನ್ನು ನಿಯಂತ್ರಣ ಮಾಡುವುದಕ್ಕೆ ಕಳ್ಳಭಟ್ಟಿ ಮಂತ್ರಿ ಎಂದು ಮಾಡಿಬಿಡಿ. ಏಕೆಂದರೆ, ಇವೆಲ್ಲಾ ಸರ್ಕಾರಕ್ಕೆ ವರಮಾನ ಬರತಕ್ಕಂಥ ಇಲಾಖೆಗಳು, ಎಲ್ಲೆಲ್ಲಿ ಕಳ್ಳಭಟ್ಟಿ ಇದೆ ಅದನ್ನೆಲ್ಲಾ ಸದೆಬಡಿದು, ಹಿಡಿದು, ಸರ್ಕಾರಕ್ಕೆ ಬರತಕ್ಕಂಥ ವರಮಾನವನ್ನು ಭರಿಸುವುದಕ್ಕಾಗಿಯೇ ಒಬ್ಬ ಕಳ್ಳಭಟ್ಟು ಮಂತ್ರಿ ಎಂದು ಮಾಡಿ. ಈ ಇಲಾಖೆಗೆ ತಕ್ಕಂಥೆ ತೂಕ, ಗಾತ್ರ, ಎತ್ತರ, ಉಳ್ಳಂಥ ವ್ಯಕ್ತಿಯನ್ನೇ ಮಂತ್ರಿಯನ್ನಾಗಿ ಮಾಡಿಬಿಡಿ.....

ಶ್ರೀ ಸಿ.ಎಂ.ಲಿಂಗಪ್ಪ: ನಾಗರಾಜ್‌ರವರೇ , ಸೆಕೆಂಡ್ಸ್ ಬಗ್ಗೆ ಹೇಳಿ.....

ಶ್ರೀ ವಾಟಾಳ್‌ನಾಗರಾಜ್: ನಿಮ್ಮ ಜೊತೆಯಲ್ಲಿ ನಾನು ಮಾತನಾಡುವುದಿಲ್ಲ, ನಾವು ಕಾನೂನು ಬಿಟ್ಟು ಮಾತನಾಡುವವರು ನೀವು ಏನು ನಮಗೆ ಹೇಳುವುದು.....

ಮಾನ್ಯ ನಾಣಯ್ಯನವರೇ, ಸಾರಾಯಿಗೊಬ್ಬ ಮಂತ್ರಿಯನ್ನಾಗಿ ಮಾಡಿಬಿಡಿ. ಕೊನೆಯದಾಗಿ, ಈ ಕುಟುಂಬ ಕಲ್ಯಾಣ ಇಲಾಖೆ ಬಹಳ ವ್ಯವಸ್ಥಿತವಾಗಿ ನಡೆಯ ಬೇಕಾಗಿರುವುದರಿಂದ ನಿರೋಧಗೊಬ್ಬ ಮಂತ್ರಿಯನ್ನಾಗಿ ಮಾಡಿಬಿಡಿ. ಏಕೆಂದರೆ, ಇಡೀ ರಾಜ್ಯಾದ್ಯಂತ ಈ ಯೋಜನೆ ಯಶಸ್ವಿಯಾಗಿ ನಡೆಯಬೇಕಾಗಿರುವುದರಿಂದ ಎಲ್ಲಾ ಕೆಡಯಿಂದಲೂ ಈ ನಿರೋಧನ್ನು ಸರಬರಾಜು ಮಾಡಬೇಕಾಗಿರುವುದರಿಂದ ನಿರೋಧ್ ಸಚಿವರು, ನಿರೋಧ್ ಇಲಾಖೆ ಎಂದು ಮಾಡಿಬಿಡಿ. ಏಕೆಂದರೆ, ಈ ಯೋಜನೆಯನ್ನು ಯಶಸ್ವಿಯಾಗಿ ನಡೆಯಬೇಕಾದರೆ ಇದು ಒಂದು ಬಹಳ ಉತ್ತಮವಾದ ಇಲಾಖೆ. ಬೇರೆ ಎಲ್ಲಾ ಇಲಾಖೆಗಳಿಗಿಂತಲೂ ಇದು ಅತ್ಯುತ್ತಮ ಇಲಾಖೆ ಎಂದು ಹೇಳಬಹುದು. ಈ ನಿರೋಧ್ ಇಲಾಯಖೆಯನ್ನು ನೀವು ತಂದರೆ ರಾಜ್ಯದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಗುತ್ತದೆ ಹಾಗೂ ನಾನೂ ಈಗಾಗಲೇ ಹೇಳಿದ ಈ ಐದು ಇಲಾಖೆಗಳನ್ನು ತಮಗೆ ಕೊಟ್ಟಿದ್ದೇನೆ. ಸ್ವಲ್ಪ ಸಮಯಾವಕಾಶ ಕೊಟ್ಟರೆ ಇನ್ನು ಹತ್ತು ಇಲಾಖೆಗಳನ್ನು ತಮಗೆ ಬರೆದುಕೊಡುತ್ತೇನೆ. ತಾವು ಇದರ ಬಗ್ಗೆ ಯೋಚಿಸಬಹುದು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ನನ್ನದೊಂದು ಮನವಿ ಏನೆಂದರೆ ತಾವು ರಾಜಕೀಯ ಜೀವನದಲ್ಲಿ ಎಂದಾದರೂ ಮುಖ್ಯಮಂತ್ರಿಯಾಗಬೇಕು ಎನ್ನುವ ಬಯಕೆ ಇದೆಯೇ?

ಶ್ರೀ ವಾಟಾಳ್‌ನಾಗರಾಜ್: ಸತ್ಯ ಏಕೆಂದರೆ ನಾನೂ ಕೂಡ ಮನುಷ್ಯ ತಾನೇ.

ಶ್ರೀ ಎಂ.ಸಿ. ನಾಣಯ್ಯ: ತಾವು ಮುಖ್ಯಮಂತ್ರಿಯಾಗುವ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿ ತಾವು ಈಗ ನಮಗೆ ಹೇಳಿದಂಥ ಇಲಾಖೆಗಳಿಗೊಬ್ಬ ಮಂತ್ರಿಗಳನ್ನಾಗಿ ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಮುಖ್ಯಮಂತ್ರಿಯಾಗುವ ಸಂದರ್ಭ ಬಂದಾಗ ನೋಡೋಣ. ಈಗ ಏನು ಪರಿಸ್ಥಿತಿ ಇದೆ ಎನ್ನತಕ್ಕಂಥದ್ದನ್ನು ಮಾತ್ರ ನಾನು ಹೇಳುತ್ತೇನೆ . ನಾನು ಮುಖ್ಯಮಂತ್ರಿಯಾಗಬೇಕು ಎನ್ನುವ ತಮ್ಮ ಬಯಕೆಯನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತೇನೆ .ನೀವು ಕೇವಲ ಸುಮ್ಮನೇ ನಾನು ಮುಖ್ಯಮಂತ್ರಿಯಾಗಬೇಕು ಎಂದು ಹೇಳದೆ ನೀವು ಎಲ್ಲರೂ ನಾಳೆ ಬೆಳಿಗ್ಗೆ ಪ್ರಾಮಾಣಿಕವಾಗಿ ರಾಜೀನಾಮೆ ಕೊಟ್ಟು ನನ್ನನ್ನು ನಿಮ್ಮನಾಯಕರನ್ನಾಗಿ ಆರಿಸಿ ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿಬಿಡಿ. ಆಗ ನಾನು ಯಾವ ರೀತಿ ಮಾಡುತ್ತೇನೆಂದು ನಿಮಗೆ ಗೊತ್ತಾಗುತ್ತದೆ. ನಾನು ಮುಖ್ಯಮಂತ್ರಿಯಾಗಬೇಕು ಎನ್ನುವ ನಿಮ್ಮ ಬಯಕೆ ಈಡೇರಿ ನಿಮ್ಮ ಕಣ್ಣಿನಿಂದ ಆನಂದಬಾಷ್ಪ ಬರುವುದಲ್ಲದೆ, ನಾನು ಮುಖ್ಯಮಂತ್ರಿಯಾದ ಮೇಲೆ ಯಾವ ಯಾವ ಖಾತೆಗಳನ್ನು ಹಂಚುತ್ತೇನೆ ಎನ್ನತಕ್ಕಂಥದ್ದನ್ನು ಕೂಡ ತಾವು ಎಲ್ಲರೂ ನೋಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ವಾಟಾಳ್ ನಾಗರಾಜ್‌ರವರೇ, ಮಾನ್ಯ ನಾಣಯ್ಯನವರಿಗೆ ಖಾತೆ ಹಂಚುವ ಮಂತ್ರಿಯನ್ನಾಗಿ ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್: ಸಂಸದೀಯ ಸಚಿವರಾಗಿ ಮಾನ್ಯ ನಾಣಯ್ಯನವರು ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಇವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ನಾನೇನು ಇವರನ್ನು ಹೊಗಳಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಕನ್ನಡ ಚಿತ್ರರಂಗಕ್ಕೆ ಹಾಗೂ ವಾರ್ತಾಇಲಾಖೆಯ ಬಗ್ಗೆ ಸಾಕಷ್ಟು ಚಿಂತನೆ ಮಾಡಿದ್ದಾರೆ. ಈ ಇಲಾಖೆಯನ್ನು ಕಾಯಕಲ್ಪ ಮಾಡಿ ಒಂದು ಶಕ್ತಿಯನ್ನು ಕೊಟ್ಟಿರುವುದರಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ನಾನು ಸದನ ಸಮಿತಿಯ ಅಧ್ಯಕ್ಷನಾಗಿ ಎರಡು ವರದಿಗಳನ್ನು ಕೊಟ್ಟಿದ್ದೆ, ಇದರ ಬಗ್ಗೆ ಮಾನ್ಯ ಸಚಿವರು ಪ್ರಾಮಾಣೀಕವಾಗಿ ತಮ್ಮ ಕೈಲಾದ ಪ್ರಯತ್ನ ಮಾಡಿದ್ದಾರೆ. ಇದರ ಜೊತೆಗೆ ಚಿತ್ರೋತ್ಸವಗಳನ್ನು ಮಾಡಿ ಕಲಾವಿದರಿಗೆ ಪ್ರಶಸ್ತಿ ಕೊಡುವಂತಹ ಕೆಲಸ ಮಾಡುವುದರ ಜೊತೆಗೆ ಕನ್ನಡ ಸಂಸ್ಕೃತಿಗೆ ಹೆಚ್ಚಿನ ಆಯಾಮ ಕೊಟ್ಟಿದ್ದಾರೆ. ಈ ಕೆಲಸಗಳನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಮಾನ್ಯ ನಾಣಯ್ಯನವರು ''ಅಜಾತಶತ್ರು'' ಹಾಗೂ ಒಳ್ಳೆಯ '' ಸ್ನೇಹ ಜೀವಿ '' ಇಂಥವರ ಖಾತೆಯನ್ನು ತೆಗೆದು ಅಷ್ಟೇ ಹಿರಿಯ ಸಚಿವರಾದ ಮಾನ್ಯ ಪ್ರಕಾಶ್‌ರವರಿಗೆ ಏಕೆ ಕೊಟ್ಟರು? ಮಾನ್ಯ ಪ್ರಕಾಶ್‌ರವರೂ ಕೂಡ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಇವುಗಳನ್ನು ನೋಡಿಕೊಂಡು ಆರಾಮಾಗಿ ಇದ್ದೇ ನನಗೇಕೆ ಈ ಖಾತೆ ಹೆಚ್ಚುವರಿಯಾಗಿ ಕೊಟ್ಟರು ಎಂದು ಒಂದು ರೀತಿಯ ಇರಿಸುಮುರಿಸು ಮಾನ್ಯ ಸಚಿವರಲ್ಲಿ ಇದೆ. ಈ ರೀತಿ ಖಾತೆ ಬದಲಾವಣೆ ಮಾಡಬೇಕಾದರೆ ಕಾರಣ ಏನು ಎನ್ನುವುದು ನನಗೆ ಅರ್ಥವಾಗಲಿಲ್ಲ ಏಕೆಂದರೆ, ವಾರ್ತಾ ಇಲಾಖೆಯಲ್ಲಿ

ಏನಾದರೂಂದು ವ್ಯತ್ಯಾಸ ಕಂಡುಹಿಡಿದು ಈ ರೀತಿ ಖಾತೆ ಬದಲಾವಣೆ ಮಾಡಿದ್ದರೆ ಪರವಾಗಿಲ್ಲ ಎಂದು ಹೇಳಬಹುದು. ಆದರೆ, ಮಾನ್ಯ ನಾಣಯ್ಯನವರಿಗೆ ಈ ಬಗ್ಗೆ ಒಂದು ಚೂರು ನೋವೂ ಕಾಣುತ್ತಿಲ್ಲ, ಅವತ್ತಿನಿಂದ ಇವತ್ತಿನವರೆಗೆ ಒಂದೇ ರೀತಿಯಲ್ಲಿ ಇದ್ದಾರೆ. ಆದೇ ದಿನ ಕ್ಯಾಬಿನೆಟ್‌ಗೆ ಹೋದರು. ಯಾವತ್ತೂ ಅವರು ಖಾತೆಯನ್ನು ತೆಗೆದು ಹಾಕಿದ್ದಕ್ಕೆ ಬೇಜಾರು ಮಾಡಿಕೊಳ್ಳಲಿಲ್ಲ ನನಗೆ ಏನು ಅನ್ನಿಸುತ್ತದೆ ಎಂದರೆ, ಆ ಖಾತೆಯನ್ನು ಮಾನ್ಯ ಪ್ರಕಾಶ್‌ರವರಿಗೆ ಕೊಟ್ಟಿದ್ದು ತಪ್ಪು ಅಲ್ಲ ಎನ್ನುವುದಕ್ಕಿಂತ ಮಾನ್ಯ ನಾಣಯ್ಯನವರಿಂದ ಕಿತ್ತುಕೊಂಡಿದ್ದು ಸಮಂಜಸವಲ್ಲ. ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದ ಇವರಿಂದ ಮತ್ತೊಬ್ಬ ಸಮರ್ಥರಿಗೆ ಈ ಖಾತೆಯನ್ನು ಕೊಟ್ಟಿದ್ದು ಅಷ್ಟು ಸಮಂಜಸವಲ್ಲ ಮಾನ್ಯ ಸಚಿವರು ತಮ್ಮ ಖಾತೆಯಲ್ಲಿ ಅಷ್ಟೇ ಸಮರ್ಥರಾಗಿದ್ದರು. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಖಾತೆ ಹಂಚುವಾಗ ಎಲ್ಲೋ ಒಂದು ರೀತಿಯಲ್ಲಿ ಎಡವಿದ್ದಾರೆ ಎಂದು ಹೇಳಬಹುದು. ಅದೇರೀತಿಯಲ್ಲಿ, ಮಾನ್ಯ ಕತ್ತಿಯವರ ಬಗ್ಗೆ ನನಗೇನೂ ದ್ವೇಷವಿಲ್ಲ, ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಮಾನ್ಯ ಉದಾಸಿಯವರು ಏನು ಪಾಪಾ ಮಾಡಿದ್ದರು? ಅವರದನ್ನು ಕಿತ್ತುಕೊಂಡು ಇವರಿಗೆ ಕೊಟ್ಟಿದ್ದಾರೆ. ಏಕೆ ಈ ರೀತಿ ಮಾಡಿದರು?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ: ಕತ್ತಿ ಎಂದರೆ ಸ್ಟ್ರಾಂಗ್, ಇವರು ಉದಾಸಿ ಉದಾಸೀನಕ್ಕೆ ಒಳಗಾಗಿದ್ದಾರೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್‌ರವರು ಈ ಮಾತು ಹೇಳಬಾರದು. ಏಕೆಂದರೆ, ಮಾನ್ಯ ಸದಸ್ಯರು, ಮಾನ್ಯ ಉದಾಸಿಯವರ ಕಛೇರಿಗೆ ಹೋಗಿ ಬೀಗ ಹಾಕಿ ಅಸಮರ್ಥರು ಎಂದು ಹೇಳಿದ್ದರು. ಈಗ ಖಾತೆ ಬದಲಾವಣೆ ಮಾಡಿಸಿ, ಅವರ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ : ನಾನು ಹೋಗಿ ಅವರ ಕಛೇರಿಗೆ ಬೀಗ ಹಾಕಿರುವುದಕ್ಕಾ ಹಾಗೂ ಅವರ ಖಾತೆ ಬದಲಾವಣೆಗೂ ಸಂಬಂಧವಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಈ ಖಾತೆ ಬದಲಾವಣೆ ಮಾಡುವ ವಿಷಯದಲ್ಲಿ ಯದ್ವಾತದ್ವ ಎಡವಿದ್ದಾರೆ. ಇದರಲ್ಲಿ ಏನೂ ಅನುಮಾನವಿಲ್ಲ. ಇವರು ಯಾವ ಕಾರಣಕ್ಕೆ ಎಡವಿದ್ದಾರೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರ ನೋವಿನಲ್ಲಿ ಕೂಡ ನಾನು ಭಾಗಿಯಾಗುತ್ತೇನೆ. ಪಾಪ ಈ ರೀತಿ ಆಗಬಾರದಾಗಿತ್ತು ಎಂದು ಹೇಳುತ್ತಾ ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಇನ್ನು ಈ ಆಯೋಗಗಳ ವಿಚಾರವಾಗಿ ಎರಡು ಮಾತನ್ನು ಹೇಳಲಿಚ್ಛಿಸುತ್ತೇನೆ. ರಾಜ್ಯದಲ್ಲಿ ನಾನ ರೀತಿಯಲ್ಲಿ ಇಲ್ಲಿಯವರೆಗೆ ಸುಮಾರು ಐವತ್ತಕ್ಕೂ ಮೇಲ್ಪಟ್ಟು ಆಯೋಗಗಳು ರಚನೆಯಾಗಿವೆ. ನನ್ನ ಹತ್ತಿರ ಯಾವಾ ಯಾವ ಆಯೋಗಗಳಿವೆ ಎನ್ನುವ ಪಟ್ಟಿ ಇದೆ ನಾನು ಅದನ್ನೆಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಇಪ್ಪತ್ತು ಆಯೋಗಗಳು ವರದಿಯನ್ನು ಕೊಟ್ಟಿವೆ. ಈ ವರದಿಯಾಧಾರದ ಮೇಲೆ ಯಾರಿಗೂ ಶಿಕ್ಷೆ ಆಗಿಲ್ಲ. ವರದಿ ಒಪ್ಪಿಗೆಯಾಗಿಲ್ಲ, ಇದರ ಬಗ್ಗೆ ಚರ್ಚೆಯಾಗಿಲ್ಲ, ಈ ಆಯೋಗಗಳ ರಚನ ಏನು? ಇದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ಖರ್ಚಾಗಿದೆ. ಆಯೋಗಗಳು ವರ್ಷವಿಡಿ ಆಯೋಗಗಳನ್ನು ನಡೆಸಿ ಸಾಕ್ಷ್ಯಗಳನ್ನು ಪಡೆದು ತೀರ್ಪನ್ನು ಕೊಟ್ಟಿವೆ. ಆದರೆ, ಆಯೋಗ ಕೊಟ್ಟಿರತಕ್ಕಂಥ ತೀರ್ಪು ಇಲ್ಲಿಯವರೆಗೆ ಎಲ್ಲೂ ಜಾರಿಯಾಗಿಲ್ಲ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಯೊಂದಕ್ಕೆ ಆಯೋಗ ರಚನೆ ಮಾಡಿ ಎಂದು ನಾವು ಎಲ್ಲರೂ ಕೇಳುತ್ತೇವೆ. ಆದರೆ, ಆಯೋಗ ರಚನೆ ಮಾಡಿ ಎಂದು ನಾವು ಕೇಳುತ್ತಿದ್ದ ಒತ್ತಾಯ ಹಾಗೂ ಉದ್ದೇಶ ಇವು ಎರಡೂ ಭಂಗವಾಗಿದೆ.

5. 10 ಪಿ. ಎಂ.

ಮಾನ್ಯ ಉಪಾಧ್ಯಕ್ಷರೆ, ಆಯೋಗದ ರಚನೆಯ ಉದ್ದೇಶಕ್ಕ ತಿಲಾಂಜಲಿಯಾಗಿದೆ. ಆಯೋಗದಲ್ಲಿ ಬರತಕ್ಕಂಥವರಿಗೆ ಕೈಮುಗಿದು ನಾನು ಪ್ರಾರ್ಥನೆ ಮಾಡುತ್ತೇನೆ. ಮುಂದೆ ಬರತಕ್ಕಂಥ ಆಯೋಗದ ಅಧ್ಯಕ್ಷರಾಗಿರಲಿ ಅಥವಾ ಛೇರ್‌ಮನ್‌ರಾಗಿರಲಿ ಬರಬೇಕಾದರೆ ನಾನು ಕೊಟ್ಟಂಥ ವರದಿಯನ್ನು ಚರ್ಚೆಗೆ ನಿಗಧಿತ ದಿನಾಂಕದೊಳಗೆ ತೆಗೆದುಕೊಳ್ಳಿ ಅಥವಾ ತೀರ್ಮಾನ ತೆಗೆದುಕೊಳ್ಳುವಂತೆ ಹೇಳಲಿಲ್ಲವೆಂದರೆ ಆಯೋಗಗಳಿಗೆ ಒಳ್ಳೆಯ ಕೀರ್ತಿ ಬರುವುದಿಲ್ಲ. ಒಳ್ಳೆಯ ಹೆಸರು ಬರುವುದಿಲ್ಲವೆನ್ನತಕ್ಕಂಥ ಮಾತನ್ನು ನಾನು ತಮಗೆ ಹೇಳುತ್ತೇನೆ. ಇದಲ್ಲದೆ ನಮ್ಮ ಸದನ ಸಮಿತಿಗಳು ಕೂಡ ಎಷ್ಟೋ ವರದಿಗಳನ್ನು ಕೊಟ್ಟಿದೆ ಯಾವ ವರದಿಗಳು ಕಾರ್ಯಗತವಾಗಿಲ್ಲ. ಯಾವ ವರದಿಯನ್ನು ಕಾರ್ಯಗತ ಮಾಡಿಲ್ಲ. ಈ ಒಂದು ಉದಾಹರಣೆಯನ್ನು ಹೇಳುವುದಾದರೆ ಒಂದು ಗಂಗಾರಾಮ್ ಕಟ್ಟಡದ್ದು, ಇದರದ್ದು ಕಣ್ಣೀರಿನ ಕಥೆ ತಪ್ಪಿತಸ್ಥರಿಗೆ ಯಾರಿಗೂ ಶಿಕ್ಷೆಯಾಗಿಲ್ಲ. ಮತ್ತೊಂದು ಸರ್ಕಸ್ ದುರಂತ ಯಾರಿಗೂ ಶಿಕ್ಷೆ ಆಗಲಿಲ್ಲ. ಮತ್ತೊಂದು ಕಳ್ಳಭಟ್ಟಿ ದುರಂತ ಯಾರಿಗೂ ಶಿಕ್ಷೆಯಾಗಲಿಲ್ಲ. ತಪ್ಪಿತಸ್ಥರೂ ಶಿಕ್ಷೆಯಿಂದ ತಪ್ಪಿಸಿಕೊಂಡರು. ತಪ್ಪಿಸಿಕೊಂಡಂಥ ತಪ್ಪಿತಸ್ಥರು ಯಾರೆಂದರೆ ಐ.ಎ.ಎಸ್ ಹಾಗೂ ಐ.ಪಿ.ಎಸ್ ಉನ್ನತ ಅಧಿಕಾರಿಗಳು. ಅವರೆಲ್ಲರೂ ಬುದ್ಧಿವಂತಿಕೆಯಿಂದ ಉಳಿದುಕೊಂಡರು. ಸತ್ತವರು ಸತ್ತರು, ಉಳಿದವರಿಗೆ ಪರಿಹಾರವಿಲ್ಲ. ಗಂಗಾರಾಮ್ ಕಟ್ಟಡ ಹೊಸದಾಗಿ ಕಟ್ಟುವುದಕ್ಕೆ ನಗರಸಭೆಯಿಂದ ಅವರಿಗೆ ಅನುಮತಿ ದೊರೆಯುವುದಕ್ಕೆ ವ್ಯವಸ್ಥೆ ನಡೆಯುತ್ತಿದೆ. ಇಂತಹ ಆಯೋಗಗಳ ಪರಿಸ್ಥಿತಿ ಈ ರೀತಿಯಾಗಿದೆ. ಮತ್ತೊಂದು ವಿಚಾರ ಏನೆಂದರೆ ಮಂತ್ರಿಗಳ ಕಾರುಗಳಿಗೆಲ್ಲಾ ಕೆಂಪುದೀಪವನ್ನು ಹಾಕಿದ್ದೀರಿ. ಇದರ ಉದ್ದೇಶ ಏನು ಒಬ್ಬ ಗಣ್ಯ ವ್ಯಕ್ತಿಗಳು ರಸ್ತೆಯಲ್ಲಿ ಬರುತ್ತಿದ್ದಾರೆ ಅಪಘಾತಗಳಾಗದೆ ಇರಲಿ ಎಂದು ಸಂಚಾರ ವ್ಯವಸ್ಥೆ ಸುಗಮವಾಗಲಿ ಎನ್ನುವ ನಿಟ್ಟಿನಲಿಲ ಹಾಕಿದ್ದೀರಿ. ಆದರೆ ಈ ನಿಗಮ ಮಂಡಳಿ ಅಧ್ಯಕ್ಷರುಗಳು ಮತ್ತು ಛೇರ್‌ಮನ್‌ರುಗಳನ್ನು ನಾವು ರಾಜಕೀಯವಾಗಿ ನಮಗೆ ಬೇಕಾದವರನ್ನು ಹಾಗೂ ಜಾತಿ ಆಧಾರದ ಮೇಲೆ ಮಾಡಿರುತ್ತೇವೆ. ಮತ್ತು ಪಕ್ಷದ ಆಧಾರದ ಮೇಲೆ ಯಾರು ಯಾರು ಬೇಕು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಸೋತವರನ್ನು, ಗೆದ್ದವರನ್ನು, ಇದ್ದವರನ್ನು ಇಲ್ಲದವರನ್ನು ಹಾಗೂ ಪಕ್ಷದ ಕಾರ್ಯ ಕರ್ತರನ್ನು ಮಾಡಿದ್ದೀರಿ. ಇವೆರೆಲ್ಲರಿಗೂ ಕೆಂಪುದೀಪವನ್ನು ಕೊಟ್ಟಿದೆ. ನನಗೆ ಅನಿಸುತ್ತಿದೆ. ಶಾಸಕರಾದವರು ಚುನಾಯಿತರಾದವರು, ಸಂವಿಧಾನ ಬದ್ಧವಾಗಿ ಜನರಿಂದ ಆಯ್ಕೆಯಾದ ಶಾಸಕರಿಗೆ ಲೆಕ್ಕಾಚಾರದ ಪ್ರಕಾರ ಇವರಿಗೆ ಕೆಂಪುದೀಪವನ್ನು ಕೊಡಬೇಕು. 224 ಕ್ಷೇತ್ರದ ಶಾಸಕರುಗಳಿಗೆ ಆ ಕೆಂಪುದೀಪವನ್ನು ಇರುವ ಕಾರುಗಳನ್ನು ಕೊಡಬೇಕು. ನನ್ನ ಪ್ರಕಾರ ಕೆಂಪುದೀಪದ ಕಾರನ್ನು ಕೊಟ್ಟಿರುವುದು ಸರಿಯಲ್ಲ. ಕೊಟ್ಟರೆ ಅಭ್ಯಂತರ ಇಲ್ಲ, ಈ ಕೆಂಪುದೀಪ ಅಂದರೆ ಅದಕ್ಕೆ ಬೇರೆ ಬೇರೆ ವ್ಯವಸ್ಥೆ ಇರುತ್ತದೆ. ಈ ಕೆಂಪುದೀಪದ ವ್ಯವಸ್ಥೆಯೇ ಸರಿಯಿಲ್ಲ. ಯಾವ ನಿಯಮದ ಪ್ರಕಾರ ಅವರುಗಳಿಗೆಲ್ಲಾ ಕೆಂಪುದೀಪದ ಕಾರುಗಳನ್ನು ಕೊಟ್ಟಿದ್ದೀರಿ? ಅದಕ್ಕೆ ಏನು ಉದ್ದೇಶ? ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳಾದ ಮೇಲೆ ಅಲ್ಲಿಯವರೆಗೆ ನಮ್ಮ ನಾಯಕರು, ಮುಖ್ಯಮಂತ್ರಿಗಳು ನಮ್ಮ ನಾಯಕರು, ಅವರ ಕಣ್ಣು ಎಷ್ಟು ಚೆನ್ನಾಗಿದೆ, ಅವರ ತಲೆ ಎಷ್ಟು ಚೆನ್ನಾಗಿ ಇದೆ. ಕಾಲು ಎಷ್ಟು ಚೆನ್ನಾಗಿ ಇದೆ, ಅವರ ಸಾಮಾಜಿಕ ನ್ಯಾಯ ಏನು, ಅವರ ಸಮಾಜವಾದ ಸಿದ್ಧಾಂತ ಏನು?

ಶ್ರೀ ಜಿ.ಸಿ. ಮಾಧುಸ್ವಾಮಿ : ಮಾನ್ಯ ವಾಟಾಳ್ ನಾಗರಾಜ್‌ರವರೇ, ನೀವು ಮೊದಲು ಆ ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರವರಿಗೆ ಕೊಟ್ಟಿದ್ದಾರೆ ಅದರ ಬಗ್ಗೆ ಮೊದಲು ಕೇಳಿ.

ಶ್ರೀ ವಾಟಾಳ್ ನಾಗರಾಜ್: ಅವರಿಗೂ ಕೊಟ್ಟಿದ್ದಾರೆ. ಕೆಂಪುದೀಪದಷ್ಟು ದುರುಪಯೋಗ, ಕೆಂಪುದೀಪದಲ್ಲಿ ನಡೆಯತಕ್ಕಂಥ ಭ್ರಷ್ಟಾಚಾರ ಯಾವುದೂ ಇಲ್ಲ. ಮಂತ್ರಿಗಳಿಗೆ ಕೆಂಪುದೀಪದ ವ್ಯವಸ್ಥೆ ಮಾಡಿರುವುದಕ್ಕೆ ನನ್ನ ಆಭ್ಯಂತರ ವಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸರಕಾರಕ್ಕೆ ಅರಿವಿಲ್ಲವೆಂದು ಕಾಣುತ್ತದೆ. ನಮ್ಮ ರಾಜ್ಯದಲ್ಲಿ ಕೆಂಪುದೀಪದ ಅವ್ಯವಸ್ಥೆಯ ಎಲ್ಲಿಯವರೆಗೆ ನಡೆದಿದೆ ಎಂದರೆ : ಮಾನ್ಯ ಹಿರಿಯ ಸಂಸಂಧೀಯ ವ್ಯವಹಾರಗಳ ಸಚಿವರ ಗಮನಕ್ಕೆ ಅಂಬುಲೆನ್ಸ್‌ನಲ್ಲಿ ಗಂಧದ ತುಂಡುಗಳನ್ನು ಹಾಕಿಕೊಂಡು ಕೆಂಪುದೀಪವನ್ನು ಹಾಕಿಕೊಂಡು ಸಾಗಿಸಿರುವ ಪ್ರಕರಣಗಳು ಇವತ್ತು ಪೋಲೀಸ್ ಠಾಣೆಗಳಲ್ಲಿ ಮೊಕದ್ದಮೆಗಳು ದಾಖಲಾಗಿದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ ಕಳ್ಳರೂ ಕೂಡ ಇವತ್ತು ಕೆಂಪು ದೀಪವನ್ನು ಹಾಕಿಕೊಂಡು ಹೋಗುವಂಥ ಪರಿಸ್ಥಿತಿ ಇದೆ ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಮಾನ್ಯ ಮುಖ್ಯಮಂತ್ರಿಗಳ ಮಂತ್ರಿ ಮಂಡಲದಲ್ಲಿ ಅವರ ಪಕ್ಷದ ಮಂತ್ರಿಗಳಾಗಿ ಇದ್ದವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್ ಪಟೇಲರವನರನ್ನು ಹಾಡಿ ಹೊಗಳಿದ್ದು ಉಂಟು. ಇವರು ಸಮಾಜವಾದ ಸಿದ್ಧಾಂತದಿಂದ ಬಹಳ ಕೆಲಸವನ್ನು ಮಾಡಿದ್ದಾರೆ. ನಿಮ್ಮ ನಾಯಕತ್ವ ನಮಗೆ ಬೇಕು. ಎಂದು ಅವರನ್ನು ಹಗಲು-ರಾತ್ರಿ ಹೊಗಳಿರುವುದು ಉಂಟು. ಇಬ್ಬರೇ ಮಾತನಾಡುವಾಗ ಕೈ ಮುಗಿದು ಹೊಗಳಿರುವುದು ಉಂಟು. ನಮ್ಮ ಮುಖ್ಯಮಂತ್ರಿಗಳು ಒಂದು ಮಹಾಲಿಂಗ ಇದ್ದ ಹಾಗೆ ? ಈ ಮಹಾಲಿಂಗ ಅಂದರೆ ಏನು? ಎಲ್ಲರಿಗೂ ರೂಪ ಇದೆ. ಈ ಮಹಾಲಿಂಗ್ ಒಂದು ಉದ್ಭವ, ಅದನ್ನು ಯಾವ ಕಡೆ ನೋಡಿದರೂ ರೂಪ ಕಾಣುವುದಿಲ್ಲ. ಯಾರು ಯಾರು ಅವರ ಪ್ರೀತಿ ವಿಶ್ವಾಸದಿಂದ ಏನೇನು ಬಯಸುತ್ತಾರೆ ಅಷ್ಟೇ ಪ್ರಸನ್ನರಾಗಿ ಒಂದು ಪ್ರೀತಿ ವಿಶ್ವಾಸ ಮೂಡತಕ್ಕಂಥದ್ದು, ಅವರವರ ಭಾವಕ್ಕೆ, ಅವರವರ ಪ್ರೀತಿಗೆ, ಅವರವರ ವಿಶ್ವಾಸಕ್ಕೆ, ಅವರವರ ಪ್ರಗತಿಗೆ ಯಾವ ಯಾವ ರೀತಿ ಬೇಕು ಅವರು ಹಾಗೆಯೇ ಇದ್ದಾರೆ. ಸುತ್ತಿಸುತ್ತಿ ಬಳಸಿದರೂ ಅವರ ವಿಕಾರ ಕಾಣುತ್ತಿಲ್ಲ. ಈ ಮಹಾಲಿಂಗ ಒಂದು ಒಳ್ಳೆಯ ಸುಂದರವಾದದ್ದು. ಅದನ್ನು ಯಾವ ಕಡೆ ನೋಡಿದರೂ ಕಣ್ಣು ಕಾಣುವುದಿಲ್ಲ, ಕಿವಿ ಇಲ್ಲ ; ಅಂದರೆ : ನಾನು ಹೋಗಿದ್ದೇನೆ ನನಗೂ ಒಳ್ಳೆಯ ಭವಿಷ್ಯವಾಯಿತು, ಇನ್ನೊಬ್ಬರು ಹೋದಾಗ ನನ್ನಬಗ್ಗೆ ಅವರು ಬಹಳ ಪ್ರೀತಿ ಇಟ್ಟು ಕೊಂಡರು. ಅವರದು ಅಷ್ಟೇ ಸಹೃದಯ ಒಳ್ಳೆಯ ಪ್ರೀತಿ ಒಳ್ಳೆಯ ರಾಜಕಾರಣಿ, ಯಾರೇ ಏನೇ ಹೇಳಿದರೂ ನಾನು ಒಪ್ಪುವುದಿಲ್ಲ. ನಿನ್ನೆ ಮಾನ್ಯ ನಂಜೇಗೌಡರು ಮಾತನಾಡುವಾಗ ನಾನು ಅದನ್ನು ತಳ್ಳಿಹಾಕಬಾರದು, ಅವರು ಯಾವುದೋ ಕೋಪದಲ್ಲಿ ಆ ಮಾತನ್ನು ಹೇಳಿದ್ದಾರೆ, ಅವರು ನಂ : 1 ಲೀಡರ್ ಅಲ್ಲವೆಂದು ಹೇಳಿದ್ದಾರೆ ನಾನು ಇದನ್ನು ಒಪ್ಪುವುದಿಲ್ಲ. ಯಾರು ಏನೇ ಹೇಳಿಕೊಳ್ಳಲಿ ರಾಜಕೀಯವಾಗಿ ಮಾತನಾಡುವುದಾದರೆ ಅವರು ಒಬ್ಬ ಪ್ರಾಮಾಣಿಕವಾದಂಥ ಪ್ರಥಮ ನಾಯಕರೇ, ಅದಕ್ಕೆ ಯಾರೂ ಅಲ್ಲಗಳೆಯಂಥದ್ದು ಇಲ್ಲ. ಅವರು ನಂ : 1 ಲೀಡ ರ್ ಇರುವುದರಿಂದಲೇ ಇಷ್ಟು ದಿನ ಅಧಿಕಾರಿದಲ್ಲಿ ಉಳಿದಿದ್ದೇ ಸಾಕ್ಷಿ. ಅವರ ನಡತೆ, ಅವರ ನುಡಿ, ಅವರ ವಿಶಾಲವಾದ ಹೃದಯವೇ

ಇವತ್ತು ಅಧಿಕಾರದಲ್ಲಿ ಉಳಿಯಲಿಕ್ಕೆ ಕಾರಣವಾಗಿರತಕ್ಕಂಥದ್ದು ನಾನು ನೋಡಿದ್ದೇನೆ , ಎಲ್ಲರೂ ಹೋದರು, ಮಾನ್ಯ ಬೊಮ್ಮಾಯಿಯವರು ಆರು ತಿಂಗಳು ಉಳಿಯುವುದಕ್ಕಾಗಲಿಲ್ಲ, ಮೂರುವರೆ ವರ್ಷದಿಂದ ಇವರು ಮುಖ್ಯ ಮಂತ್ರಿಗಳು ಆದಾಗಿನಿಂದ ಇವರನ್ನು ಹೊರಗೆ ಹಾಕುತ್ತೇವೆ. ಎಂದು ಹೇಳಿದ್ದರೂ ಯಾರ ಕೈಯಿಂದಲೂ ಹೊರಗೆ ಹಾಕುವುದಕ್ಕಾಗಲಿಲ್ಲ. ಆದ್ದರಿಂದ ಇದು ಒಂದು ಮಹಾಲಿಂಗ ಈ ಮಹಾಲಿಂಗ ಎಲ್ಲರನ್ನು ಸುಧಾರಿಸಿ ಪ್ರೀತಿಯಿಂದ ಕಂಡಿರತಕ್ಕಂಥ ವ್ಯಕ್ತಿ ಮತ್ತು ತರ್ಕದಲಿ, ಸದನದಲ್ಲಿ ಉತ್ತರ ಕೊಡುವಾಗ ಒಂದು ಪಕ್ಷ ಏರುಪೇರು ಆಗಬಹುದು ಆದರೆ ತರ್ಕಕ್ಕೆ ನಿಂತರೆ ತರ್ಕ ಮಾಡಲಿಕ್ಕೆ ಹೊರಟರೆ ಕರ್ನಾಟಕದದಲ್ಲಿ ಅವರ ರಾಜಕಾರಣಿ ಇನ್ನೊಬ್ಬರು ಯಾರೂ ಇಲ್ಲ. ನಾನು ಆ ಮಾತನ್ನು ಇವತ್ತು ಎದೆ ತಟ್ಟಿ ಹೇಳುತ್ತೇನೆ. ನಾನು ಕಳೆದ 30 ವರ್ಷಗಳಿಂದಲೂ ನೋಡುತ್ತಿದ್ದೇನೆ. ಶ್ರೀ ಕಾಂತವೀರ ಗೋಪಾಲಗೌಡರ ಕಾಲದಿಂದ ನೋಡಿದ್ದೇನೆ .ಹಾಗೂ ಜಾರ್ಜ್ ಫರ್ನಾಂಡೀಸ್‌ರಲ್‌ರ ಜೊತೆಯಲ್ಲಿ ನೋಡಿದ್ದೇನೆ. ನನ್ನ ಜೊತೆಯಲ್ಲಿ ಅವರು ಓಡಾಡಿದ್ದಾರೆ. ಇಂತಹ ವ್ಯಕ್ತಿಯನ್ನು ಹಿಮಾಲಯಪರ್ವತದಿಂದ ಒಂದೇ ಬಾರಿಗೆ ಕೆಳಗೆ ಎಳೆಯತಕ್ಕಂಥದ್ದು ಸರಿಯಾದ ಮಾರ್ಗ ಅಲ್ಲ. ನನಗೆ ಮಾನ್ಯ ನಂಜೇಗೌಡರ ಬಗ್ಗೆ ಬಹಳ ಗೌರವ ಇದೆ. ನಿನ್ನೆ ಅವರ ಭಾಷಣದಲ್ಲಿ ಹಾಗೂ ಮಾನ್ಯ ನಂಜೇಗೌಡರ ಸಭೆಯಲ್ಲಿ ಈ ಮುಖ್ಯಮಂತ್ರಿಗಳ ವ್ಯಕ್ತಿತ್ವದ ಬಗ್ಗೆ ಹೇಳಿದ್ದೇನೆ. ಅವರ ವ್ಯಕ್ತಿತ್ವ ಇರುವುದರಿಂದಲೇ ಇವತ್ತು ಅವರ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಅವರ ಜಾತಕವನ್ನು ನೋಡಬೇಕು. ಇಂತಹ ಜಾತಕ ಕರ್ನಾಟಕದ ಇತಿಹಾಸದಲ್ಲಿ ಶ್ರೀ ಕೆ.ಸಿ. ರೆಡ್ಡಿಯವರ ಕಾಲದಿಂದ ಹಾಗೂ ಮಾನ್ಯ ಹನುಮಂತಯ್ಯನವರ ಕಾಲದಿಂದ ನೋಡುತ್ತೇವೆ ಆದರೆ ಇವರ ಜಾತಕ ವಿಶೇಷ ಅವರ ಹಣೆಬರಹವೇ ವಿಶೇಷ, ಒಂದು ಕಥೆ ಹೇಳುತ್ತೇನೆ. ಒಂದು ರಾಜ್ಯದಲ್ಲಿ ಹೊರಗಡೆಯಲ್ಲಿ ಒಂದುಎಮ್ಮೆ ಒಂದು ನಾಯಿ ನರಿ, ಕರಡಿ ಅಂದರೆ ಪ್ರಾಣಿಗಳ ರೀತಿಯಲ್ಲಿ ಒಬ್ಬರಿಗೆ ಒಬ್ಬರು ಹೊಂದಾಣಿಕೆ ಇಲ್ಲ. ಇನೊಂದು ಮಂತ್ರಿಮಂಡಲ ಇದರಲ್ಲಿ ಹೊಂದಾಣಿಕೆ ಇಲ್ಲ. ಬೆಳಗಾದ ತಕ್ಷಣ ಇವರನ್ನು ಕಿತ್ತು ಹಾಕುತ್ತೇವೆ . ಇದೊಂದು ಮಂತ್ರಿಮಂಡಲ, ಹೊರಗಡೆ ಈ ಮಂತ್ರಿಗಳನ್ನು ನಮ್ಮ ಕಡೆ ಬಾ ನಮ್ಮ ಕಡೆ ಬಾ ಎಂದು ಕರೆಯುವ ಇನ್ನೊಂದು ಮೂರು ಪ್ರಾಣಿಗಳು, ಒಂದು ಮುದಿಸಿಂಹ, ಮತ್ತೊಂದು ಮುದಿ ಹುಲಿ, ಮತ್ತೊಂದು ಮುದಿ ಚಿರತೆ, ಈ ಮೂರು ಪ್ರಾಣಿಗಳು ಕಾಯುತ್ತಿದೆ, ಮಂತ್ರಿಮಂಡಲದ ವ್ಯಕ್ತಿಗಳು ಅವರ ಹತ್ತಿರಕ್ಕೆ ಹೋಗುತ್ತವೆ. ಹೋದ ತಕ್ಷಣ ಭಯ ಬಂದು ಎಲ್ಲಾದರೂ ಉಂಟೆ,ನಾನು ಇಲ್ಲ ಹೋದರೆ ಈ ಪ್ರಾಣಗಳು ತಿಂದು ಹಾಕಿ ಬಿಡುತ್ತವೆ. ಆದ್ದರಿಂದ ನಾವು ನರಿ ಜೊತೆಯಲ್ಲಿ ಇಲ್ಲಿಯೇ ಇದ್ದು ಜಿಜೋಣ. ಅಲ್ಲಿ ಹೋದರೆ ಸರಿಯಾಗುವುದಿಲ್ಲವೆಂದು ಬುದ್ಧಿವಂತರಾಗಿ ಬಿಟ್ಟರು. ಸಿಂಹದ ಕತೆ ಮುಗಿದುಹೋಗಿದೆ. ಹುಲಿ ಕತೆಯೂ ಮುಗಿದುಹೋಗಿದೆ. ಈ ಚಿರತೆ ಎದ್ದೆದ್ದು ಎಲ್ಲೋ ಬಿದ್ದು ಅದು ಒಂದು ಕಡೆ ಇದೆ. ಈ ಮೂರು ಹೊರಗಡೆ ಇದೆ. ಈ ಪ್ರಾಣಿಗಳು ಒಂದು ಕಡೆ ಕಿತ್ತಾಡುತ್ತಿವೆ. ಇದು ಎಲ್ಲಿ ಹೋದರೂ ಆ ಮೂರು ಜನರು ಕಾಯುತ್ತಿದ್ದಾರೆ.ಅವರು ಹತ್ತಿರಕ್ಕೆ ಹೋಗುತ್ತಾರೆ , ಹೋದ ತಕ್ಷಣ ಅಲ್ಲಿ ಹುಲಿ ಇದೆ ಇವರ ಹತ್ತಿರ ಹೋಗುವುದು ಬೇಡಪ್ಪ, ಇದು ಯಾವತ್ತು ಇದ್ದರೂ ನಮ್ಮನ್ನು ತಿನ್ನುತ್ತವೆ ಎಂದು ಹಿಂದಕ್ಕೆ ಬರುತ್ತವೆ. ಸಿಂಹದ ಹತ್ತಿರಕ್ಕೆ ಹೋದರೆ, ಇದು ಸಿಂಹ,ನಮ್ಮನ್ನು ತಿನ್ನುತ್ತವೆ ಎಂದು ಹೇಳಿ ವಾಪಸ್ಸು ಬರುತ್ತವೆ ಮತ್ತೆ ಚಿರತೆ ಎಂದಿದರೂ ಇದು ನಮ್ಮ ತಲೆಹಿಡಿಯುವುದು, ಆದ್ದರಿಂದ ಇಲ್ಲೇ ಇರೋಣವೆಂದು ಹೇಳಿ ಉಳಿದುಕೊಳ್ಳುತ್ತವೆ ಹಾಗಿದೆ ಈಗಿನ ವ್ಯವಸ್ಥೆ. ಈ ವ್ಯವಸ್ಥೆಯ ಮಂತ್ರಿಮಂಡಲ, ಇವನ್ನು

ತಿಂದುಹಾಕಬೇಕು, ಹೊಂಚುಹಾಕಬೇಕು ಎಂದು ಆ ಮೂರು ಪ್ರಾಣಿಗಳು. ಇವರು ನಂಬಿರತಕ್ಕಂತಹ ನಾವು ಜನ ಒಂದು ರೀತಿಯಲ್ಲಿ ನಿಸ್ಸಾರ ಆಹಮದ್‌ರವರು ಹೇಳಿರುವಂತೆ ಕುರಿಗಳು ಸಾರ್‌ಕುರಿಗಳು ಅಂತ ನಾವು. ಇದು ನಮ್ಮ ರಾಜ್ಯದ ಜನರ ಪರಿಸ್ಥಿತಿಯಾಗಿದೆ. ಅದಕ್ಕೆ ಯಾರೂ ಎಂದು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಕುರಿಯಾರು? ಮುದಿ ಸಿಂಹ ಯಾರು? ಇದು ಯಾವುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅರ್ಥವಾಗುವವರಿಗೆ ಅರ್ಥವಾಗಲಿ, ನಾನು ಅದನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಗಳಾಗಿರುವವರು, ಮಂತ್ರಿಮಂಡಲವನ್ನು ಬಿಟ್ಟು ಹೋಗುವಾಗ ಆಡುವ ಮಾತುಗಳು ನಮ್ಮ ರಾಜಕಾರಣದ, ಶಾಸನ ಸಭೆಯಲ್ಲಿ ನಾನು 5 ವರ್ಷ ಮಂತ್ರಿಯಾಗಿದೆ, ಮಂತ್ರಿಮಂಡಲವನ್ನು ಬಿಟ್ಟು ಹೋಗುವಾಗ ನಮ್ಮ ನಾಯಕರಿಗೆ ಇಷ್ಟೊಂದು ಗೌರವವಾಗಿ, ಗಾಂಭೀರ್ಯವಾಗಿ ನಾಲ್ಕು ಮಾತುಗಳನ್ನು ಆಡಬೇಕಾದುದು ಇದು ಶಿಷ್ಟಾಚಾರ. ಇದನ್ನು ಯಾರೂ ಹೇಳಿಕೊಡಬೇಕಾಗಿಲ್ಲ. ನಾನು ತಮಗೆ ಒಂದು ವಿಷಯವನ್ನುಜ್ಞಾಪಿಸಬಯಸುತ್ತೇನೆ ,ತಾವು ಗಾಂಧಿವಾದಿಗಳು, ಹನುಮಂತಯ್ಯನವರ ಕಾಲದಲ್ಲಿ, ಆದ ಜಿ ಸಿದ್ದಲಿಂಗಯ್ಯನವರು ವಿದ್ಯುಚ್ಛಕ್ತಿ ಮಂಡಳಿ ಮಂತ್ರಿಗಳಾಗಿದ್ದರು. ಅವರ ಮಗನ ಮೇಲೆ ಯಾವುದೇ ಒಂದು ಕಿಡಿ ಪತ್ರಿಕೆಯಲ್ಲಿ ಸುದ್ದಿ ಬಂದ ತಕ್ಷಣ ಬೆಳಿಗ್ಗೆ ರಾಜೀನಾಮೆಯನ್ನು ತೆಗೆದುಕೊಂಡು ಹನುಮಂತಯ್ಯನವರ ಮನೆಗೆ ಹೊರಟರು. ಆಗ ಹನುಮಂತಯ್ಯನವರು, ಸಿದ್ದಲಿಂಗಯ್ಯನವರೇ, ನಿಮ್ಮ ರಾಜೀನಾಮೆ ಬರುತ್ತದೆಂದು ನಾನು ಕಾಯುತ್ತಿದ್ದೆ ಎಂದರು. ಅಂದರೆ ಅವರಿಬ್ಬರ ಸ್ನೇಹ ಎಂತದ್ದು ಎಂಬುದು ಇದರಿಂದ ಅರ್ಥವಾಗುತ್ತದೆ. ರಾಜೀನಾಮೆ ಪತ್ರವನ್ನು ತೆಗೆದುಕೊಂಡು ತಮ್ಮ ಜೇಬಿನಲ್ಲಿಟ್ಟುಕೊಂಡರು. ಆರಾಮವಾಗಿ ಕಾಫಿ, ತಿಂಡಿಯನ್ನು ತೆಗೆದುಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದರೆ. ಇವತ್ತು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ ; ಶ್ರೀ ಡಿ.ಟಿ.ಜಯಕುಮಾರ್‌ರವರು ತಮ್ಮ ಸ್ಥಾನತ್ಯಜಿಸಿ ಹೋಗುವಾಗ ಮುಖ್ಯಮಂತ್ರಿಗಳ ಮೇಲಿ ಹೇಳಿರುವಂತಹ ಮಾತು ಗಳು ಇದು ಯಾರಿಗೂ ಕೂಡ ಗೌರವ ತರುವಂತದ್ದಲ್ಲ. ಈ ಮಾತುಗಳನ್ನು ನಾನು ಕೇಳಿದಾಗ ನನಗೆ ನೋವಾಯಿತು. ಇಂಥ ರಾಜಕಾರಣದಲ್ಲಿ ಇರುವ ಬದಲು ಈ ರಾಜಕಾರಣವನ್ನು ಬಿಟ್ಟು ಹೋಗುವುದು ಒಳ್ಳೆಯದು. ನಾವೆಲ್ಲಾ ರಾಜಕಾರಣದಲ್ಲಿ ಇರಬಾರದು. ನಮಗೆ ರಾಜಕಾರಣ ಬೇಕಿರುವುದು ಈ ರೀತಿಯದಲ್ಲ. ರಾಜಕಾರಣ ಗರಡಿ ಮನೆಯಲ್ಲ. ರಾಜಕಾರಣವೆಂದರೆ ಆ ರೀತಿಯಲ್ಲಿ ಜಗಳವಾಡುವುದಲ್ಲ. ರಾಜಕಾರಣಕ್ಕೆ ಒಂದು ವ್ಯಕ್ತಿತ್ವವಿದೆ. ನಾನು 1967ರಲ್ಲಿ ಶಾಸನಸಭೆಗೆ ಆಯ್ಕೆಯಾದೆ. ನಾನು 1959ರಿಂದ ಕರ್ನಾಟಕ ಏಕೀಕರಣ ಕಾಲದಿಂದಲೂ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಈ ತರಹ ಮಾತನಾಡಿಕೊಂಡು, ಬೈದುಕೊಂಡು, ನನಗೆ ಅವತ್ತು ಅವರು ಬಳಸಿರುವ ಭಾಷೆ ಕೇಳಿ ಪ್ರಮಾಣವಾಗಿ ನನಗೆ ನೋವಾಯಿತು. ಒಬ್ಬ ನಿರ್ದಯವಾದ ಮನುಷ್ಯನನ್ನು ಹಿಗ್ಗಾಮುಗ್ಗಾ ಹರಾಜು ಹಾಕುವ ರೀತಿಯಲ್ಲಿ ಬೈಯುವುದಾದರೆ ಇದು ಬೈಯ್ದವರಿಗೆ ಅಗೌರವವೇ ಹೊರತು, ಅವರಿಗೇನ್ನು ಅಗೌರವವಿಲ್ಲ. ಒಂದೇರಡು ವಿಚಾರಗಳನ್ನು ನಾನು ತಮಗೆ ಹೇಳುತ್ತೇನೆ. ಬಿ.ಎಸ್.ಪಾಟೀಲ್ ಮತ್ತು ಶಂಕರಬಿದರಿ ಅವರು ತೆಗೆದುಕೊಳ್ಳುವಷ್ಟು ಆಧೋಗತಿಗೆ ಈ ಆಡಳಿತ ಮುಟ್ಟಿದೆ. ನನಗನಿಸುತ್ತದೆ ಎಲ್ಲಾ ಕಾಲದಲ್ಲೂ ಅಧಿಕಾರಿಗಳು, ಮುಖ್ಯ ಮಂತ್ರಿಗಳು ಹೇಳಿದವರು ಅವರಿಗೆ ಬೇಕಾಗಿರುವ ಅಧಿಕಾರಿಗಳನ್ನು ಇಟ್ಟುಕೊಂಡಿಲ್ಲ. ಎಲ್ಲಾ ಕಾಲದಲ್ಲೂ ಅವರಿಗೆ ಬೇಕಾಗಿರುವ ಅಧಿಕಾರಿಗಳನ್ನು ಇಟ್ಟುಕೊಂಡಿರುವುದು ಇದೇನೂ ಹೊಸದೇನೂ ಇಟ್ಟುಕೊಂಡು ಕೆಲಸವನ್ನು ಮಾಡಿದ್ದಾರೆ. ನಾವು ನಾಲ್ಕೂವರೆ ವರ್ಷ

ಅವರು ಮಂತ್ರಿಯಾಗಿದ್ದಾಗ ಅವರ ಜೊತೆಯಲ್ಲಿ ನಾನು ಹೋಗಿದ್ದೇನೆ. ಅವರಿಂದ ನಾವು ಕೆಲಸವನ್ನು ಪಡೆದಿದ್ದೇವೆ ಅನುಕೂಲವನ್ನು ಸಹ ಪಡೆದಿದ್ದೇವೆ . ಇವತ್ತು ನಮಗೆ ಈ ಅಧಿಕಾರಿಗಳನ್ನು ಕಂಡರೆ ಆಗುವುದಿಲ್ಲ. ನಾಲ್ಕುವರೆ ವರ್ಷ ಈ ಅಧಿಕಾರಿಗಳ ಹತ್ತಿರ ಹೋಗಿ, ಸಲಾಮು ಹೊಡೆದು, ದೂರವಾಣಿ ಮಾಡಿ ಎಲ್ಲಾ ಕೆಲಸವನ್ನು ಅವರಿಂದ ಮಾಡಿಸಿಕೊಂಡಿದ್ದೇವೆ. ಇವತ್ತು ಈ ಅಧಿಕಾರಿಗಳು ನಿಮಗೆ ಹಿಡಿಸಲಿಲ್ಲವಾ? ನಾನು ಆ ಕಾರ್ಯಾಲಯಕ್ಕೆ ಹೋಗಿದ್ದೇನೆ. ನಾವು ಅನೇಕ ಜನ ತಾಸಕರೂ ಸಹ ಹೋಗಿದ್ದೇವೆ. ಅಲ್ಲಿ ಬಿ.ಎಸ್. ಪಾಟೀಲರು ಇರಬಹುದು, ಶಂಕರ ಬಿದರಿಯವರು ಇರಬಹುದು, ನಮ್ಮ ಖಾನ್‌ರವರು ಇರಬಹುದು, ಸಾಧಿಕ್ ಇರಬಹುದು, ಪರಿಶಿಷ್ಟ ಜನಾಂಗ ವ್ಯಕ್ತಿ ಸಿದ್ದಯ್ಯನವರ ಹತ್ತಿರ ನಾನು ಹೋಗಿದ್ದೇನೆ. ಅನೇಕ ಜನರ ಸ್ನೇಹಿತರು ಹತ್ತಿರ ಹೋಗಿದ್ದೇನೆ. ಶಂಕರಪಾಟೀಲರು ಇದ್ದಾರೆ. ದಯಾಶಂಕರ್ ಇದ್ದಾರೆ. ಎಲ್ಲರನ್ನು ನೋಡಿದಾಗ ಯಾವ ತಾಸಕರ ಮೇಲೂ ಹೌಹಾರಿ, ತಿವಿದು , ಗಲಾಟೆ ಮಾಡಿದಂತಹ ವ್ಯಕ್ತಿಗಳಲ್ಲಿ . ಇವತ್ತು ಆ ಸ್ಥಳದಲ್ಲಿ ಶ್ರೀ ಬಿ.ಎಸ್. ಪಾಟೀಲರು ಇಲ್ಲದಿದ್ದರೆ ಮುಖ್ಯಮಂತ್ರಿಯವರ ಕಛೇರಿ ಇಷ್ಟೊತ್ತಿಗೆ ಹರಾಜು ಆಗಿ ದಿವಾಳಿ ಆಗುತ್ತಿತ್ತು. ನಾವು ವೇಗದಲ್ಲಿ ಏನೂ ಮಾತನಾಡತಕ್ಕಂಥದ್ದು ಬೇಡ; ಏನೂ ಆಗತಕ್ಕಂಥದ್ದು ಬೇಡ, ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಯಾರು ಏನೇ ತಿಳಿದುಕೊಂಡರೂ ಚಿಂತೆಯಲ್ಲಿ. ಶ್ರೀ ಸಿದ್ದಯ್ಯನವರು ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದರು. ಇವತ್ತು ಅಂತಹ ಒಬ್ಬ ವ್ಯಕ್ತಿಯ ಬಗ್ಗೆ ನಾನು ಸಂತೋಷಪಡುತ್ತೇನೆ .ಸಮಾಜವಾದ ಸಿದ್ಧಾಂತದಲ್ಲಿ ಹಿನ್ನೆಲೆಯಲ್ಲಿ ಬಂದಿದ್ದಂಥ ಸಿದ್ದಯ್ಯನವರುತಮ್ಮ ತಾಲ್ಲೂಕಿನಲ್ಲಿ ಎ.ಸಿ. ಯಾಗಿದ್ದರು. ಇನ್ನು ಎರಡನೆಯದಾಗಿ ಹೆಂಡ ಮತ್ತು ಹೆಣ್ಣು ತಮ್ಮ ದೌರ್ಬಲ್ಯ ಎಂಬ ಹೇಳಿಕೆ ಏನಿದೆ, ಇದು ಬೇಕೇ? ನಮ್ಮ ರಾಜಕಾರಣಕ್ಕೆ ಇದು ಬೇಕೇ? ನಾವು ಈ ತರಹ ಮಾತನಾಡಬೇಕೇ? ಇದು ರಾಜಕೀಯವೇ? ಮುಖ್ಯಮಂತ್ರಿಗಳು ಯಾರನ್ನೂ ಬಿಡಲಿಲ್ಲ. ಅಮೇರಿಕಾದ ಅಧ್ಯಕ್ಷರಾದ ಶ್ರೀ ಬಿಲ್‌ಕ್ಲಿಂಟನ್ ತರಹ ಎರಡು ವರ್ಷದಿಂದ ತಪ್ಪಿಸಿಕೊಳ್ಳಲಿಲ್ಲ. ಜೀ ಟಿ.ವಿ.ಗೆ ನನ್ನ ವ್ಯವಸ್ಥೆ ಈ ರೀತಿಯ ಇದೆಯೆಂದು ಬಹಿರಂಗವಾಗಿ ಹೇಳಿದರು. ಈ ರಾಷ್ಟ್ರದ ಎಷ್ಟು ಜನ ರಾಜಕಾರಣಿಗಳು ಇಷ್ಟೊಂದು ಧೈರ್ಯವಾಗಿ ನನ್ನ ತರಹ ಮಾತನಾಡುತ್ತಿದ್ದಾರೆ ಎಂದು ಹೇಳಿದರು. ನೀವು ಪದೇ ಪದೇ ಹೆಂಡ, ಹೆಣ್ಣು ಎಂದು ಹೇಳುವುದು, ಆದರಿಂದ ಮಡಿವಂತಿಕೆ ಎಂದು ಅವರು ಎಲ್ಲಿಯೂ ಹೇಳಿಲ್ಲ. ಹೆಜ್ಜೆಹೆಜ್ಜೆಗೂ ಆ ಮಾತನ್ನು ಹೇಳುವುದು ಸರಿಯಲ್ಲ.ಇದಲ್ಲದೆ ಮತ್ತೆ ಅವರಿಗೆಲ್ಲಾ ಬಾಡೂಟ ಕೊಟ್ಟರು, ಇವರಿಗೆಲ್ಲಾ ಸಾರು ಊಟ ಕೊಟ್ಟರು ಎಂದು ಅವರು ಎಲ್ಲಿರಿಗೂ ಒಂದೇ ಊಟವನ್ನು ಕೊಡುವುದು. ಮುಖ್ಯಮಂತ್ರಿಗಳಾದ ಮೇಲೆ ಅವರು ಕೊಟ್ಟಿರುವಂತಹ ಊಟ, ಸ್ವಾತಂತ್ರ್ಯ ಮಂತ್ರಿಗಳ ಮೇಲಿಟ್ಟಿರುವ ವಿಶ್ವಾಸವನ್ನು ನಾವು ನೋಡಬಹುದು. ಅಧಿಕಾರದಲ್ಲಿರುವಾಗ ನಾವು ಸರಿ, ಅಧಿಕಾರವಿಲ್ಲದಿದ್ದಾಗ ನನ್ನ ನಾಲಿಗೆ ಬದಲಾವಣೆ ಆಗುವಂತಹದ್ದು ರಾಜಕಾರಣಿಗಳಾದ ಯಾರಿಗೂ ಒಳ್ಳೆಯದಲ್ಲ. ಯಾರು ಏನೇ ಹೇಳಲಿ. ಬಿಡಲಿ, ಈ ಮಟ್ಟಕ್ಕೆ ನಾವು ಇಳಿದರೆ ನಾವು ರಾಜಕಾರಣ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಪಕ್ಷಾಂತರಿಗಳಾದವರು ಯಾವ ರೀತಿ ಇರುತ್ತಾರೆಂದರೆ ಇವತ್ತು ಈ ಪಕ್ಷದಲ್ಲಿದ್ದು, ಟಿಕೇಟ್ ಸಿಗಲಿಲ್ಲವೆಂದರೆ ಇನ್ನೊಂದು ಪಕ್ಷಕ್ಕೆ ಹೋಗುವುದು, ಹಾಗಾದರೆ ಪಕ್ಷಾಂತರವಾದ ಬಳಿಕ ಹಿಂದಿದ್ದ ಪಕ್ಷವನ್ನು ಬೈದುಕೊಂಡು ಈ ಪಕ್ಷ ಸರಿಯಿಲ್ಲ ಎಂದು ಹೇಳುವುದೇ? ಇದು ಸರಿಯಾದ ಮಾರ್ಗವಲ್ಲ, ಒಳ್ಳೆಯ ನೀತಿಯಲ್ಲ ಎನ್ನುವುದನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತೇನೆ. ಯಾರೇ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳಾದರೂ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಾರೆ; ಅದು ಸಹಜ. ಅದನ್ನು ಬಿಟ್ಟು ಯಾವುದನ್ನಾದರೂ ಹೇಳಿ. ತಮಗೆ ಬೇಕಾದ

ಐ.ಎ.ಎಸ್.ಐ.ಪಿ.ಎಸ್. ಅಧಿಕಾರಿಗಳನ್ನು ನೇಮಿಸಿ ಕೊಳ್ಳುತ್ತಾರೆ. ಮುಖ್ಯಮಂತ್ರಿಗಳ ಜೊತೆಯಲ್ಲಿ ಇವರ ಜಗಳ ಏತಕ್ಕೆಂದರೆ, ತತ್ವಕಲ್ಲ, ನೀತಿಗಲ್ಲ, ನನಗೆ ಯಾವ ಪೋರ್ಟ್‌ಫೋಲಿಯೋ ಕೊಡಲಿಲ್ಲ ಎನ್ನುವ ಕಾರಣ ಮುಖ್ಯ. ಈ ಅಷಾಡಭೂತಿತನ ಇರಬಾ ರದು. ಅವರು ನಮ್ಮ ಸ್ನೇಹಿತರೇ, ನನಗೆ ಬಹಳ ಬೇಕಾದವರು, ಅವರು ನಮ್ಮ ಪಕ್ಷದ ಕ್ಷೇತ್ರದವರು ಏಕೆ ಈ ಮಾತನ್ನು ಇವರ ಬಾಯಿಂದ ಆಡಿಸಿತು ಎಂಬುದು ನನಗೆಅರ್ಥವಾಗುತ್ತಿಲ್ಲ. ಆ ತರಹ ಆಗಬಾರದಾಗಿತ್ತು ತಮ್ಮ ಪ್ರಣಾಳಿಕೆಯಲ್ಲಿ ಪಾನವಿರೋಧವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ನಾನು ದೀರ್ಘವಾಗಿ ಅದರ ಬಗ್ಗೆ ಹೇಳುವುದಿಲ್ಲ. ಒಂದು ಕಡೆ ನೀವು ಕರ್ನಾಟಕ ರಾಜ್ಯ ಮಧ್ಯಪಾನ ಸಂಯಮ ಮಂಡಳಿ ಎಂದು ಮಾಡುತ್ತೀರಿ. ಇದರಲ್ಲಿ ನೆಮ್ಮದಿಯ ಜೀವನಕ್ಕೆ ಬೇಕು ದುಡಿತ, ಖಂಡಿತಾ ಬೇಡ ಕುಡಿತ ಎಂದು ಹೇಳುತ್ತೀರಿ. ಆದರೆ ಅಬ್ಕಾರಿ ಇಲಾಖೆಯನ್ನು ಮುಚ್ಚಿದ್ದೀರಾ? ಸಾರಾಯಿ ಅಂಗಡಿಗಳನ್ನು ಮುಚ್ಚಿದ್ದೀರಾ? ಸಾರಾಯಿ ಮತ್ತುಅಬ್ಕಾರಿ ಯಿಂದ ಬರುವಹಣವನ್ನು ನಿಲ್ಲಿಸಿದ್ದೀರಾ? ಯಾವುದೂ ಇಲ್ಲ. ಈ ಮಂಡಳಿ ಏಕೆ ಬೇಕು? ಯಾವ ಉದ್ದೇಶಕ್ಕಾಗಿ ಬೇಕಾಗಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ಹಿಂದೆ ವಾರ್ತಾ ಖಾತೆ ನನ್ನ ಕೈಯಲ್ಲಿ ಇತ್ತು ನಿಜ. ಆದರೆ ಈಗ ಅದು ಮಾನ್ಯ ಎಂ.ಪಿ.ಪ್ರಕಾಶ್‌ರವರ ಕೈಯಲ್ಲಿ ಇದೆ. ಈ ಮಂಡಳಿಯನ್ನು ರದ್ದು ಮಾಡಬೇಕೆಂದು ನಾನು ಮೊದಲೇ ಯೋಚನೆ ಮಾಡಿದ್ದೇ. ಅಡ್ವರ್‌ಟೈಸ್‌ಮೆಂಟ್ ಬೋರ್ಡ್ ಹಾಕುವುದು ಅದಕ್ಕೆ ಸುಮ್ಮನೆ ಹಣವನ್ನು ಖರ್ಚು ಮಾಡುವುದು, ಅದಕ್ಕೆ ಒಂದು ಕಛೇರಿ ಇವೆಲ್ಲಾ ಬೇಡವೆಂದು ತೀರ್ಮಾನಕ್ಕೆ ಬಂದಿದ್ದೆ. ಈಗಲೂ ಮಾನ್ಯ ವಾಟಾಳ್ ನಾಗರಾಜ್‌ರವರು ಅದನ್ನೇ ಹೇಳುತ್ತಿದ್ದಾರೆ. ನಿಜವಾಗಿಯೂ ಮಧ್ಯಪಾನವನ್ನುಖಂಡಿತವಾಗಿಯೂ ನಿಷೇಧ ಮಾಡುವುದಕ್ಕಾಗುವುದಿಲ್ಲ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ನಾವು ಹೇಳಿದ್ದೇವೆ. ಇದೆಲ್ಲಾ ಗೊತ್ತಿದ್ದು ಸಹ ಸಂಯಮ ಮಂಡಳಿ ಇರುತ್ತದೆ. ಎಲ್ಲೋ ಒಂದು ಕಡೆ ಕುಡಿಯುವವರುಗೆ ಸಂಯಮ ಇರಲಿ ಎಂದು ಹೇಳುವಂತದಕ್ಕೆ ಒಂದು ಮಂಡಳಿ. ಆ ಸಂದರ್ಭಕ್ಕೇಲ್ಲಾ ಕುಡಿಯುವುದರಲ್ಲಿ ಸಂಯಮ ಇರಲಿ ಎಂದು ಹೇಳುವುದಾದರೆ ಅದನ್ನು ನೀವು ಒಪ್ಪಿಕೊಳ್ಳಿ, ನಾನು ಒಪ್ಪಿಕೊಳ್ಳುತ್ತೇನೆ. ಈ ಸಂಯಮ ಮಂಡಳಿ ಏತಕ್ಕೆ ಇರಬೇಕೆಂದರೆ ಮಧ್ಯಪಾನ ಮಟ್ಟಿಗೆ ಇರಬಾರದು, ಜನರಲ್ಲಿ ಅವೇರ್‌ನೆಸ್ ಬರಬೇಕು ಎನ್ನುವ ಹಿನ್ನೆಲೆಯಲ್ಲಿ ಹೇಳುತ್ತಿದ್ದೇವೆ. ನಿಮ್ಮ ಚಿಂತನೆಯನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಬಹಳ ಒಳ್ಳೆಯದು ಮತ್ತು ಕೆಟ್ಟದ್ದು ಸಹ ಇದೆ. ಮನುಷ್ಯನ ಹೃದಯ ವೈಶಾಲ್ಯತೆ, ಮನುಷ್ಯನಲ್ಲಿರತಕ್ಕಂತಹ ವಿಚಾರಧಾರೆ ಈ ಫೆಲೋಶಿಪ್ ಎಂದು ಹೇಳುತ್ತಿರತಕ್ಕಂಥದ್ದು, ಸಂಕುಚಿತ ಮನೋಭಾವನೆ ಇರತಕ್ಕಂತವರು ಈ ಫೆಲೋಶಿಪ್‌ನವರ ಜೊತೆಯಲ್ಲಿ ಸೇರಿ ಚರ್ಚೆ ಮಾಡಿ ಮಾತನಾಡುತ್ತಿರುವ ಸಂದರ್ಭದಲ್ಲಿ ಸಮಗ್ರವಾದ ಚಿಂತನೆ ಉದ್ಭವವಾಗುತ್ತದೆ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರೇ ನಿಮ್ಮಲ್ಲಿ ಬಹಳ ಫೆಲೋಶಿಪ್ ಇದೆ ಹೃದಯ ವೈಶಾಲ್ಯತೆಯಲ್ಲಿ ಬಹಳ ಎತ್ತರಕ್ಕೆ ಹೋಗುತ್ತೀರಿ. ಅಂತಹ ಒಂದು ಸಮೂಹದಲ್ಲಿ ನೀವು ಸೇರಿದರೆ.

ಶ್ರೀ ಕುಂಬ್ಳೆ ಸುಂದರರಾವ್: ರಗ್ಗು ಹೊದ್ದು ಮಲಗಬೇಡಿ, ಪೆಗ್ಗು ಏರಿಸಿ ಮಲಗಿ ಜೊತೆ ಸೇರಿಯೆಂದು ಅಷ್ಟೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್: ಪಾನನಿಷೇಧದ ಬಗ್ಗೆ ಪ್ರಣಾಳಿಕೆಯಲ್ಲಿ ಹೇಳಿದ್ದು ಏನು? ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಪಾನನಿಷೇಧ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರ ಹೊಸ ಆದೇಶ ಹೊರಡಿಸಿದೆ, ಯಾವ್ಯಾವ ಜಿಲ್ಲೆಗಳಲ್ಲಿ ಪ್ರವಾಸಿಕೇಂದ್ರಗಳಿವೆ, ಆ ಪ್ರವಾಸಿಕೇಂದ್ರಗಳಿಗೆ ಹೋಗುವವರಿಗೆ ಕುಡಿಯುವ ವ್ಯವಸ್ಥೆಯಾಗ ಬೇಕು ಅದಕ್ಕೆ ಪರವಾನಗಿ ಕೊಡುತ್ತಾರೆ. ಸರ್ಕಾರ ಒಂದು ಆದೇಶ ಹೊರಡಿಸುತ್ತದೆ. ಇಡೀ ರಾಜ್ಯದಲ್ಲಿ ಎಂಥೆಂಥ ಜಾಗಗಳಲ್ಲಿ ನಮ್ಮ ಊರಿನಲ್ಲಿ ಹಿರೇಮಗಳೂರು ಎಂದು ಗ್ರಾಮ. ಅಲ್ಲಿ ರಾಮಮಂದಿರವಿದೆ. ಆ ಗ್ರಾಮದಲ್ಲಿ ಸಹ ಹೆಂಡದ ಅಂಗಡಿ ಪ್ರಾರಂಭಸಲು ಅನುಮತಿಯನ್ನು ಕೊಡುತ್ತೇವೆ ಶಾಸಕರಿಂದ ಕಾಗದ ತೆಗೆದುಕೊಂಡು ಬರಬೇಕೆಂದು ಹೇಳಿದ್ದಾರೆ. ಇಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿರುವ ಸಂದರ್ಭದಲ್ಲಿ ಮಸೀದಿ ದೇವಾಲಯ ಮತ್ತು ಚರ್ಚ್‌ಗಳು ಇರುವ ಕಡೆಗಳಲ್ಲಿ ಹೆಂಡದ ಅಂಗಡಿಗಳನ್ನು ಪ್ರಾರಂಭ ಮಾಡಲು ಸರ್ಕಾರ ಅನುಮತಿಯನ್ನು ಕೊಡುತ್ತದೆಂದು ಈಗಾಗಲೇ ಸಾರ್ವಜನಿಕರಿಗೆ ಗೊತ್ತಾಗಿದೆ. ಕುಡಿಯುವುದನ್ನು ನಿಲ್ಲಿಸುವಂತಹ ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಎಂ.ಸಿ. ನಾಣಯ್ಯ : ಅದನ್ನು ನಾನು ಒಪ್ಪುವುದಿಲ್ಲ. ಸರ್ಕಾರದ ನೀತಿಸ್ಪಷ್ಟವಾಗಿದೆ. ಪೂಜಾಮಂದಿರಗಳು ಇರುವ ಸ್ಥಳಗಳಲ್ಲಿ ಇಂತಹ ಅಂಗಡಿಗಳು ಇರಬಾರದೆಂದು ಸ್ಪಷ್ಟವಾಗಿದೆ. ಅವರು ಹೇಳುವಹಾಗೆ ಟೂರಿಸ್ಟ್ ಪಾಲಿಸಿ ನಾವು ಮಾಡಿದ್ದೇವೆ. ಕೆಲವು ಭಾಗಳಿಗೆ ಟೂರಿಸ್ಟ್‌ಗಳು ಹೋಗುತ್ತಾರೆ. ಆ ಸಂದರ್ಭದಲ್ಲಿ ಅವರು ಉಳಿದುಕೊಳ್ಳುವುದುಕ್ಕೆ ವಸತಿ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಎಲ್ಲಿಯಾದರೂ ಅಲ್ಲೊಂದು ಲಾಡ್ಜಿಂಗ್ ಸೆಂಟರ್ ಕಟ್ಟುವುದಾದರೆ ಟೂರಿಸ್ಟ್‌ಗಳು ತಂಗುವುದಕ್ಕೆ ಅವಕಾಶ ಮಾಡುವುದಾದರೆ, ಟೂರಿಸ್ಟ್‌ಗಲು ಸುಮ್ಮನೆ ನೋಡಿಕೊಂಡು ವಾಪಸ್ಸು ಬರುವುದಕ್ಕಾಗುತ್ತದೆಯೇ? ಆರು ಏಳುಗಂಟೆಯಾದ ಮೇಲೆ ಸಮಯವನ್ನು ಕಳೆಯ ಬೇಕಾಗುತ್ತದೆ. ಸಮಯ ಕಳೆಯಲು ಕುಡಿದರೆ ತಪ್ಪೇನಾಗುತ್ತದೆ? ವಸತಿಗೃಹಗಳನ್ನು ಕಟ್ಟುವಾಗ 20 ಒಳ್ಳೆಯ ರೂಮ್‌ಗಳನ್ನು ಮಾಡಿ ಆ ಜಾಗದಲ್ಲಿ ಹೊರಗಡೆಯಿಂದ ಬರತಕ್ಕ ಟೂರಿಸ್ಟ್‌ಗಳು ಸಮಯವನ್ನು ಹಾಯಾಗಿ ಕಳೆಯುವುದಕ್ಕೆ ಪಾಲಿಸಿ ಮಾಡಿದ್ದೇವೆ. ಅದರಲ್ಲಿ ತಪ್ಪಿದೆಯಾ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ವ್ಯಾಜ್ಯ ಎಲ್ಲಾ ಮಾಡಿ, ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡು ಬರಲಿಯೆಂದು ಹೇಳುತ್ತೀರಿ.

ಶ್ರೀ ಎಂ.ಸಿ. ನಾಣಯ್ಯ : ನೀವು ಆ ಫೆಲೋಶಿಪ್‌ಗೆ ಬನ್ನಿ ನೀವು ಏನಾಗುತ್ತೀರಿ ಎಂದು ನೋಡಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನೀತಿ ಒಂದು ಕಡೆ ಕುಡಿಯಬೇಡಿಯೆಂದು ಹೇಳುವುದು. ಮತ್ತೊಂದು ಕಡೆ ನೀವು ಅಬಕಾರಿ ಇಲಾಖೆಯ ವತಿಯಿಂದ ಸಾರಾಯಿ ವ್ಯಾಪಾರ ಮಾಡಿ ಬಾರ್‌ಗಳನ್ನು ಮಾಡಿ ಡಿಸ್ಟಿಲರೀಸ್‌ಗಳಿಗೆ ಅನುಮತಿಯನ್ನು ಕೊಟ್ಟು ಈ ತರಹ ಮಾಡಿ ನೀವು ನಿಮ್ಮ ಆತ್ಮಶೋಧನೆ ಮಾಡಿಕೊಳ್ಳಿ. ಇದಕ್ಕೆ ಮಂತ್ರಿಮಂಡಲ ಇರಬೇಕೇ? ಮಂತ್ರಿಮಂಡಲ ಇರುವುದಾದರೆ ಸಂಪೂರ್ಣ ಪಾನನಿಷೇಧವನ್ನು ಸರ್ಕಾರ ಜಾರಿಗೆ ತನ್ನಿ. ಎರಡರಲ್ಲಿ ಒಂದು ಮಾಡಿ. ಒಂದು ಕಡೆ ಮಂತ್ರಿಮಂಡಲ ಇಟ್ಟುಕೊಂಡು ಇಲ್ಲ ಮಂತ್ರಿ ಮಂಡಲ ಬೇಡ. ಜನಗಳ ಮುಂದೆ ಇಂತಹ ಮೋಸ ಇರಬಾರದು. ಮೂರು ತಿಂಗಳಿಂದ ನಿಮ್ಮ ಸರ್ಕಾರ ನಿಮ್ಮ ವ್ಯಾಜ್ಯ ನಿಮ್ಮ ದಳದ ವ್ಯಾಜ್ಯದಿಂದ ಸರ್ಕಾರದ ಆಡಳಿತ ಕುಸಿದಿದೆ. ಸಾಮಾನ್ಯ ಜನರಿಗೆ ಆಡಳಿತ ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಪ್ರತಿ ದಿನ

ಹೆಜ್ಜೆ ಹೆಜ್ಜೆಗೂ ಯಾರು ಮುಖ್ಯಮಂತ್ರಿಯಾಗಬೇಕು. ಮುಖ್ಯಮಂತ್ರಿಗಳನ್ನು ಹೇಗೆ ಕಾಲಿಡಿದು ಎಳಿಯಬೇಕು.ಇವರನ್ನು ಮಂತ್ರಿಮಾಡಬೇಕು ಸಹಿ ಸಂಗ್ರಹಣೆ, ದೆಹಲಿಗೆ ನಿಯೋಗ. ಪ್ರತಿಯೊಂದು ಸ್ವಲ್ಪ ಹೆಚ್ಚು ಕಡಿಮೆ ಸುಮಾರು ನಾಲ್ಕು ತಿಂಗಳುಗಳಿಂದ ಈ ರಾಜ್ಯದಲ್ಲಿ ಒಂದು ಕವಡೆಯಷ್ಟು ಕೆಲಸ ಆಗಲಿಲ್ಲ. ಯಾವ ಇಲಾಖೆಯಲ್ಲೂ ಕೂಡ ಆಗಲಿಲ್ಲ. ಇದರಿಂದ ಸರ್ಕಾರಕ್ಕೆ ಎಷ್ಟು ಅಘಾತವಾಗಿದೆ ನಮಗೆ ಆಗಿದೆ, ರಾಜ್ಯದ ಜನತೆಗೆ ಈವೊಂದು ಅಪಾಯಕಾರಿ ಬೆಳವಣಿಗೆಯಾಗಿದೆ. ಉಳಿದಿರತಕ್ಕದ್ದು ಇನ್ನು ಎಂಟು ತಿಂಗಳು. ನೀವು ಆಡಳಿತ ನೆಡಸಬೇಕಾಗಿರುವುದು ಐದು ತಿಂಗಳು ವರ್ಗಾವರ್ಗಿಗೆ ಇನ್ನು ಎರಡು ತಿಂಗಳು. ಅದು ಆದಮೇಲೆ ಅಲ್ಲಿಂದ ಗೈಡ್‌ಲೈನ್ಸ್ ಬರುತ್ತದೆ. ಸೆಪ್ಟೆಂಬರ್ ಅಥವಾ ಇನ್ನು ಯಾವಾಗಲೋ ನೀವು ಶಂಕುಸ್ಥಾಪನೆಗಳನ್ನು ಮಾಡಬೇಡಿ, ಗುದ್ದಲಿಪೂಜೆ ಮಾಡಬೇಡಿ ಯಾವುದೇ ನೀತಿನಿಯಮಗಳನ್ನು ಮಾಡಬೇಡಿಯೆಂದು ಬರುತ್ತದೆ. ಈ ಪರಿಸ್ಥಿತಿ ಆಗುತ್ತದೆ. ನನಗನಿಸುತ್ತದೆ ನಾಳೆ ಆಯವ್ಯಯವನ್ನು ಯಾವ ರೀತಿ ಮಂಡಿಸುತ್ತಾರೋ ನನಗೆ ಗೊತ್ತಿಲ್ಲ. ಈ ಆಯವ್ಯಯ ಮಂಡನೆಯಾದ ಮೇಲೆ ನಿಮ್ಮ ಸರ್ಕಾರಕ್ಕೆ ಅಷ್ಟು ಬುಡ ಭದ್ರವಿಲ್ಲ ಎನ್ನತಕ್ಕ ಮಾತುಗಳಿವೆ. ಅದರ ಬಗ್ಗೆ ನಾನು ತಲೆಕೆಡಿಸಿಕೊಂಡಿಲ್ಲ. ನಾಳೆ ಏನಾಗುತ್ತದೋ ಎನ್ನುವ ಪ್ರಶ್ನೆ. ನಾಳೆ ಮಂಡಿಸುವ ಆಯವ್ಯಯದಲ್ಲಿ ಶಾಸಕರಿಗೆ ಒಂದು ಕೋಟಿ ರೂಪಾಯಿಗಳನ್ನು ಅವರವರ ಕ್ಷೇತ್ರಗಳಿಗೆ ನಿಮ್ಮ ವಿವೇಚನಾ ಅನುದಾನ ಎಂದು ಕೊಡುತ್ತೇವೆಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾಡಿರುವ ಕೆಲಸಗಳಿಗೆ ಬಿಲ್ ಕೊಟ್ಟಿಲ್ಲ. ಮುತ್ತಿಗೆ ಹಾಕುವುದಕ್ಕೆ ಹೊರಟಿದ್ದಾರೆ. ಇವರು ಒಂದು ಕೋಟಿ ರೂಪಾಯಿ ಕೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಕಾಗೋಡು ತಿಮ್ಮಪ್ಪನವರೆ, ಬೆಳಿಗ್ಗೆ ತಾವು ಇದ್ದಿರಿ ಲೋಕಸಭಾ ಸದಸ್ಯರುಗಳಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಂಸದೀಯ ಸಚಿವರಾದ ನಾಣಯ್ಯನವರು, ಪ್ರಕಾಶ್‌ರವರು, ಸಿಂಧ್ಯಾರವರು ಗೋವಿಂದೇಗೌಡರು, ನಾಗೇಗೌಡರು, ಬಚ್ಚೇಗೌಡರು ನೀವೆಲ್ಲಾ ನಮ್ಮ ಸ್ನೇಹಿತರು ನಾನು ಈ ಸಭೆಯ ಮೂಲಕ ಯಾವುದೇ ಪಕ್ಷವಿರಲಿ, ನಾನು ಕಳಕಳಿಯಿಂದ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ ನಿಮ್ಮ ಮುಖ್ಯಮಂತ್ರಿಗಳಿಗೆ ಹೇಳಿ, ಹಣಕಾಸಿನ ಸಚಿವರಿಗೆ ಹೇಳಿ 250 ಕೋಟಿ ರೂಪಾಯಿಗಳಾಗಬಹುದು. ತಾವು ಕೊಡುವಂತೆ ಹೇಳಿ. ಈ ವರ್ಷ ಇದು ಆರಂಭವಾದರೆ ತಾವು ಮಾಜಿಯಾದರೆ ಅಥವಾ ಶಾಸಕರಾದಾಗ ನಿಮಗೆ ಅನುಕೂಲವಾಗುತ್ತದೆ. ಎಲ್ಲಾ ದೃಷ್ಟಿಯಿಂದ ಒಂದು ಕೋಟಿ ರೂಪಾಯಿಯನ್ನು ಒಂದೊಂದು ಮತ ದಾರ ಕ್ಷೇತ್ರಕ್ಕೆ ಇಡಲಿಲ್ಲವೆಂದರೆ ಧರಣ ಮಾಡುವುದು ಶತಸಿದ್ಧ. ನಾನಂತೂ ಧರಣಿ ಮಾಡಿತ್ತೇನೆ ಕೂಡುವುದು ಬಿಡುವುದು ಆ ಪ್ರಶ್ನೆ ಕೂಡಲೇ ಬೇಕೆಂದು ಧರಣಿ ಮಾಡುತ್ತೇವೆ ಕೊಡುವುದು ಬಿಡುವುದು ಆ ಪ್ರಶ್ನೆ ಬೇರೆ. ಕೂಡಲೇ ಬೇಕೆಂದುಧರಣಿ ಮಾಡುತ್ತೇನೆ.ಎನ್ನುವ ಮಾತನ್ನು ನೇರವಾಗಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಉಪಾಧ್ಯಕ್ಷರೇ, ನಿನ್ನೆ ನಾನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಕೊಡಗು ಹತ್ತಿ ಉರಿಯುತ್ತಿದೆ. ಅದಕ್ಕೆ ಅವಕಾಶ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಶಾಂತಿ ಕದಡುವ ವಿಷಯದಲ್ಲಿ ತಾವು ಅವಕಾಶ ಕೊಡಲಿಲ್ಲಪೆಂದರೆ ಬಹಳ ಕಷ್ಟವಾಗುತ್ತದೆ. ನಿನ್ನೆ ದಿವಸ ಮಾನ್ಯ ಸಭಾದ್ಯಕ್ಷರು ಒಂದು ಮಾತನ್ನು ಹೇಳಿದರು. ಖಂಡಿತಾ ಅವಕಾಶ ಕೊಡುತ್ತೇನೆಂದು

ಹೇಳಿದ್ದಾರೆ. ತಮಗೂ ಸೂಚನೆಯನ್ನು ಕೊಟ್ಟಿದ್ದಾರೆ. ದಯವಿಟ್ಟು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ ಈಗ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ಅವಕಾಶ ಕೊಡೋಣ ತಾವು ಕೂಡಿ. ಮಾನ ಶ್ರೀರಾಮರೆಡ್ಡಿಯವರು ತಾವು ಮಾತನಾಡಬೇಕು.

ಶ್ರೀ ಹೆಚ್.ಡಿ.ಬಸವರಾಜ್ : ನಾನು ಅದರ ಸಲುವಾಗಿ ಕಾಯ್ದುಕೊಂಡು ಕುಳಿತಿದ್ದೇನೆ. ವಿಷಯದ ಗಾಂಭೀರ್ಯತೆಯನ್ನು ತಾವು ನೋಡಬೇಕು. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ನಿಮಗೆ ಅವಕಾಶ ಮಾಡಿ ಕೊಡೋಣ ಇದು ಮುಗಿಯಲಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯದ ವ್ಯವಸ್ಥೆ ಕೆಟ್ಟಿದೆ. ನಾನು ಕಾಲಿಂಗ್ ಅಟೆನೆಷನ್ ಕೊಟ್ಟಿದ್ದೇನೆ. ನಮಗೆ ತಾವು ಜಾನ್ ಕೊಡುವುದಿಲ್ಲ. ನಾವು ಕೆಲಸ ಹೇಗೆ ಮಾಡಬೇಕು?

ಶ್ರೀ ಹೆಚ್.ಡಿ.ಬಸವರಾಜ್ : ಅಲ್ಲಿ ಕಾನೂನು ಸುವ್ಯವಸ್ಥೆಯಿಲ್ಲ. ಕೆಲವು ಪಕ್ಷದವರು ಮಾಡತಕ್ಕ ಹೇಳಿಕೆ, ಅವರ ಒಂದು ಬೇಡಿಕೆ.....

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಫೆಬ್ರುವರಿ 3ನೇ ತಾರೀಖು ಸರ್ಕಾರ ಏನು ಆರ್ಡರ್ ಮಾಡಿದೆ ಅದು ಬಹಳ ಸೀರಿಯಸ್ ಇಷ್ಯು. ನಾನು ಜನರಿಗೆ ಏನು ಹೇಳಬೇಕು?

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನೊಂದು ಸೂಚನೆಯನ್ನು ಕೊಟ್ಟಿದ್ದೇನೆ. ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದಾರೆ. ದಯವಿಟ್ಟು ಅವಕಾಶ ಕೊಡಬೇಕೆದು ಕೇಳಿಕೊಳುತ್ತೇನೆ. ನಾಲ್ಕೈದು ದಿವಸಗಳಿಂದ ಇದೇ ಒಂದು ವಿಚಾರದಲ್ಲಿ ಅವಕಾಶ ಕೊಡಿಯೆಂದು ಅಧ್ಯಕ್ಷರನ್ನು ಅವರ ಕೊಠಡಿಯಲ್ಲಿ ಕೇಳಿದ್ದೇನೆ, ಅವರು ಒಪ್ಪಿದ್ದಾರೆ.

ಉಪಾಧ್ಯಕ್ಷರು : ಏಕೆಂದರೆ ಸಮಯದ ಅಭಾವವಿದೆ. ಇವತ್ತು ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ನಮ್ಮದು ಕಾಲಿಂಗ್ ಅಟೆನಷನ್ ಇದೆ ನಮಗೆ ಅವಕಾಶ ಮಾಡಿಕೊಡಬೇಕು. ಇವತ್ತು ನಮ್ಮದು ಕೊಶ್ಚನ್ ಇತ್ತು ಅದು ಬರಲಿಲ್ಲ ಕಾಲಿಂಗ್ ಅಟೆನ್ಷನ್‌ಗೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಈಗ ಸಾಧ್ಯವಿಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:ಇವತ್ತು ನಮ್ಮದು ಪ್ರಶ್ನೆಯಿತ್ತು. ಕಾಲಿಂಗ್ ಅಟೆನ್ಷನ್‌ಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ತಾವು ನಮಗೆ ನ್ಯಾಯ ಮಾಡಬೇಕು. ತಾವು ನಮಗೆ ರಕ್ಷಣೆ ಮಾಡಬೇಕು.

ಶ್ರೀ ಹೆಚ್.ಡಿ.ಬಸವರಾಜ್: ನಿನ್ನೆ ಸಾಯಂಕಾಲ ಸಭಾಧ್ಯಕ್ಷರು ನೀಡಿದ ಭರವಸೆಯನ್ನು ತಾವು ಕಡತ ತರಿಸಿ ನೋಡಿ. ಅದರ ಆಧಾರದ ಮೇಲೆ ಇವತ್ತು ತಾವು ದಯವಿಟ್ಟು ಅವಕಾಶ ಕೊಡಬೇಕು.

ಉಪಾಧ್ಯಕ್ಷರು: ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ತಾವು ಹೇಳಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಸರ್ಕಾರ ತಪ್ಪಿಸಿಕೊಳ್ಳುತ್ತಿದೆ. ನಾನು ಭಾಷಣ ಮಾಡುವುದಕ್ಕೆ ನನಗೆ ಹಕ್ಕಿದೆ. ನನ್ನದು ನ್ಯಾಷನಲ್ ಪಾರ್ಟಿಯಿದೆ. ರಾಷ್ಟ್ರಮಟ್ಟದಲ್ಲಿ ಮೂರನೆಯ ಪಾರ್ಟಿ ನನ್ನದು. ಬಹಳ ಮುಖ್ಯವಾದ ವಿಷಯ.

ಉಪಾಧ್ಯಕ್ಷರು: ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

ಶ್ರೀಸೈಯದ್‌ಜುಲ್ಫಿಕರ್‌ಹಷ್ಮಿ : ಕಾಂಗ್ರೆಸ್ ಬಿಜೆಪಿ ಪಕ್ಷದವರು ಎಲ್ಲರೂ ಮಾತನಾಡುತ್ತಿದ್ದಾರೆ. ನನ್ನದು ಮೂರನೆಯ ಪಕ್ಷ.

ಶ್ರೀ ಹೆಚ್.ಡಿ.ಬಸವರಾಜ್ : ಇದು ಬೇರೆ ವಿಚಾರ . ಪಕ್ಷದ ಜೊತೆಗೆ ಇದನ್ನು ಸೇರಿಸುವುದಕ್ಕಾಗುವುದಿಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನನ್ನದು ರಾಷ್ಟ್ರೀಯ ಪಕ್ಷ, ಜನ ನೋಡಿತ್ತಿದ್ದಾರೆ. ನಮ್ಮ ಪಾರ್ಟಿ ಶಾಸಕ ಏನು ಮಾಡುತ್ತಿದ್ದಾನೆಂದು, ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅನ್ಯಾಯವಾಗುತ್ತಿದೆ, ಅವರ ಮೇಲೆ ಅತ್ಯಾಚಾರ ಅನಾಚಾರ ನಡೆಯುತ್ತಿದ್ದರೆ , ಸುಮ್ಮನೆ ಕುಳಿತಿದ್ದೇನೆಂದು ಕೇಳುತ್ತಾರೆ. ಅದಕ್ಕೆ ನಾನೇನು ಉತ್ತರ ಕೊಡಲಿ?

SRI S. RAJENDRAN : By this new reservation policy, the entire scheduled caste people have been killed in this State. ಈ ಸರ್ಕಾರ ಅನ್ಯಾಯವಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್ : ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ನಾನು ಧರಣಿ ಮಾಡಲೇಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಹೆಚ್.ಡಿ.ಬಸವರಾಜ್‌ರವರು ಧರಣಿ ಮಾಡಲು ವೆಲ್ ಒಳಗೆ ಬಂದು ಅಧ್ಯಕ್ಷರ ಪೀಠದ ಮುಂದುಗಡೆ ನಿಂತುಕೊಂಡರು)

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ನನ್ನದು ಕಾಲಿಂಗ್ ಅಟೆನ್‌ಷನ್ ಬಹಳ ಮುಖ್ಯ ನಿನ್ನೆ ದಿವಸ ತಾವು ನೋಡಿದ್ದೀರಿ. ಲಕ್ಷಾಂತರ ಜನ ಸೇರಿದ್ದಾರೆ ಬೆಂಳೂರಿನಲ್ಲಿ .ಬಹಳ ಸೆನ್ಸಿಟಿವ್ ಇದೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನನ್ನ ನೋಟೀಸ್‌ಗೆ ಮಾನ್ಯ ವಿರೋಧಪಕ್ಷದ ನಾಯಕರು ಸಹ ಸಹಿ ಮಾಡಿದ್ದಾರೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಬಸವರಾಜ್‌ರವರು ಕೊಡಗಿನಲ್ಲಿ ಏನೋ ಹತ್ತಿ ಉರಿಯುತ್ತಿದೆ ಎಂದು ಹೇಳಿದರು. ಈಗ ನಾನು ಅಲ್ಲಿಂದಲೇ ಬಂದೆ ಏನೂ ಇಲ್ಲ.

5.40 ಪಿ.ಎಂ.

(ಗೊಂದಲ)

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:ಒಂದು ವಾರವಾಯಿತು. ನೋಟೀಸ್ ಕೊಟ್ಟಿದ್ದೇನೆ. ಅಜೆಂಡಾದಲ್ಲಿ ಬಂದಿದೆ. ಈ ಸರ್ಕಾರ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ನನಗೆ ತಾವು ಅವಕಾಶ ಕೊಡಬೇಕು.

ಉಪಾದ್ಯಕ್ಷರು: ನೋಡಿ, ತಾವು ತಮ್ಮ ಜಾಗಕ್ಕೆ ಹೋಗಿ.

ಶ್ರೀ ಬಿ.ಬಿ. ಶಿವಪ್ಪ: ಅವಕಾಶ ಯಾವಾಗ ಕೊಡುತ್ತೀರಿ ಎಂದು ಹೇಳಬೇಕು.

ಉಪಾಧ್ಯಕ್ಷರು: ಈಗ ಆರೂವರೆ ಗಂಟೆಗೆ ಸಭೆಯನ್ನು ಮುಕ್ತಾಯ ಮಾಡುವುದು ಇದೆ. ಅದರ ಸಲುವಾಗಿ ಇನ್ನು ನಲ್ವತ್ತು ನಿಮಿಷದೊಳಗೆ ಏನೂ ಆಗುವುದಿಲ್ಲ ಅದಕ್ಕಾಗಿ .....

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:ಕಾಲಿಂಗ್ ಅಟೆನ್‌ಶನ್ ಅಜೆಂಡಾದಲ್ಲಿ ಇದೆ . ಸರ್ಕಾರದವರು ತಪ್ಪು ಮಾಡುತ್ತಿದ್ದಾರೆ. ನಾನು ಸುಮ್ಮನೆ ಬಂದು ಕೇಳುತ್ತಿಲ್ಲ. ನಾವು ಇಲ್ಲಿ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಒಂದು ನಿಮಿಷ ತಾವು ಈಗ ಒಂದು ಮಾತು ಹೇಳಿದಿರಿ, ಆರೂವರೆ ಗಂಟೆಗೆ ಇವತ್ತು ಸದನವನ್ನು ಮುಗಿಸುತ್ತೇನೆ ಎಂದು. ಈಗ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಬೇಕು. ಆದಾದಮೇಲೆ ಪುಟ್ಟಣ್ಣಯ್ಯನವರು, ರಾಜೇಂದ್ರನ್, ಹಷ್ಮಿ, ಮಾಧುಸ್ವಾಮಿ -ಇಷ್ಟು ಜನ ಮಾತನಾಡುವವರು ಇದ್ದಾರೆ. ಇಷ್ಟು ಜನ 45 ನಿಮಿಷಗಳಲ್ಲಿ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ ಇನ್ನೂ ಅನೇಕ ಜನರು ಇದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ಅರಿಕೆಮಾಡಿದ ಕೊಳ್ಳುವುದು ಏನೆಂದರೆ ಇವತ್ತು ಈ ಭಾಷಣವನ್ನು ಇಲ್ಲಿಗೇ ನಿಲ್ಲಿಸಿ ಏನೇನು ನಮ್ಮ ಗಮನ ಸೆಳೆಯುವ ಸೂಚನೆಗಳು ಇವೆ, ಕೆಲವು ಪ್ರಶ್ನೋತ್ತರಗಳೂ ಇವೆ. ಅದನ್ನು ದಯಮಾಡಿ ತಾವು ತೆಗೆದುಕೊಳ್ಳಿ. ಆಮೇಲೆ ನಾವೇನೋ ಹೇಳುವುದು, ಯಾರೋ ಬೆಂಕಿ ಇಡುವುದು ಅದು ಬೇಡ. ಯಾರ್ಯಾರಿಗೆ ಅವಕಾಶ ಸಿಗುತ್ತದೆ ಎಂದರೆ ಅದು ಸಭೆಯ ಸರ್ವಸದಸ್ಯರ ಹಕ್ಕದು. ಅದಕ್ಕೆ ಯಾವುದೇ ಪಕ್ಷದ ಬಣ್ಣ ಕಟ್ಟುವುದು ಬೇಡ. ಇನ್ನು ಗಮನ ಸೆಳೆಯವು ಸೂಚನೆ ಇದೆ. ನಿನ್ನೆ ಸಭಾಧ್ಯಕ್ಷರು ನಮಗೆ ಆಶ್ವಾಸನೆ ಕೊಟ್ಟಿದ್ದರು. ನಮ್ಮ ಪ್ರಶ್ನೆಗಳಿಗೆ ದಯವಿಟ್ಟು ಉತ್ತರ ಕೊಡಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ

ಉಪಾಧ್ಯಕ್ಷರು: ತಾವು ತಮ್ಮ ತಮ್ಮ ಜಾಗಗಳಿಗೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿ ಕೇಳಿ. ಒಬ್ಬೊಬ್ಬ ಸದಸ್ಯರೂ 15 ನಿಮಿಷ, 20ನಿಮಿಷ ಮಾತನಾಡಿ ಎಂದು ಹೇಳಿದರೆ ಅರ್ಧಗಂಟೆ, ಎರಡುಗಂಟೆ ಅವರು ತೆಗೆದುಕೊಂಡರೆ ಹೇಗೆ ಸಾಧ್ಯವಾಗುತ್ತದೆ ? ನಾನೇನು ಮಾಡಬೇಕು? ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

(ಗೊಂದಲ)

ಶ್ರೀ ಎಂ.ಸಿ ನಾಣಯ್ಯ : ಅವರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಮಾನ್ಯ ಶಿವಪ್ಪನವರು , ಹಷ್ಮಿಯವರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಈ ಅಷ್ಟೊ ವಿಚಾರಗಳನ್ನುತೆಗೆದುಕೊಳ್ಳಲೇಬೇಕಾಗುತ್ತದೆ. ಇವತ್ತು ಆರೂವರೆ ಗಂಟೆಗೆ ಸದನವನ್ನು ಮುಂದೂಡಬೇಕಾಗುತ್ತದೆ. ಕಾರಣ, ಏಳೂವರೆ ಗಂಟೆಗೆ ಮುಖ್ಯಮಂತ್ರಿಗಳು ಎಲ್ಲಾ ಸದಸ್ಯರುಗಳ ಒಂದು ಸಭೆಯನ್ನು ಕರೆದಿದ್ದಾರೆ. ನಾನು ಈ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಆದ್ದರಿಂದ ಈಗ ಅವಕಾಶ ಇದ್ದರೆ, ರಾಜ್ಯಪಾಲರ ಭಾಷಣದ ಮೇಲೆ ಯಾರಾದರೂ ಮಾತನಾಡುವುದಕ್ಕೆ ಅವಕಾಶ ಇದ್ದರೆ ಯಾರಾದರೂ ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಇದ್ದರೆ ಯಾರಾದರೂ ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಪುನಃ 22ನೇ ತಾರೀಖಿಗೆ ನಾವು ಸೇರುವುದು ಉಂಟು. ಆಗ ಎಲ್ಲಾ ವಿಚಾರಗಳನ್ನು ಎತ್ತಿಕೊಂಡು ನಾವು ಚರ್ಚೆ ಮಾಡಬಹುದು. ಚರ್ಚೆಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಇಲ್ಲಿ ಅಜೆಂಡಾದಲ್ಲಿ ಬಂದಿದೆ. ಅಜೇಡಾ ಪ್ರಕಾರ ತೆಗೆದುಕೊಳ್ಳಬೇಕು. ಅದರ ಪ್ರಕಾರವೇ ನಡೆದುಕೊಳ್ಳಬೇಕು.

ಶ್ರೀ ಎಂ.ಸಿ. ನಾಣಯ್ಯ: ಅಜೆಂಡಾ ಪ್ರಕಾರ ಕೆಲವು ಸಂದರ್ಭದಲ್ಲಿ ನಡೆಯುವುದಕ್ಕೆ ಆಗುವುದಿಲ್ಲ. ಪ್ರತಿಯೊಂದೂ ಕೂಡ ಅಜೆಂಡಾ ಪ್ರಕಾರವೇ ನಡೆದರೆ ಇಂತಹ ಪರಿಸ್ಥಿತಿ ಬರುವುದಿಲ್ಲ. ಯಾವುದೋ ಒಂದು ವಿಚಾರಕ್ಕೆಅರ್ಧದಿವಸ ಆಗುತ್ತದೆ. ಇದಕ್ಕೆ ಏನು ಮಾಡುವುದು? ಪ್ರತಿಯೊಂದನ್ನೂ ಅಜೆಂಡಾ ಪ್ರಕಾರವೇ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಇದು ನಮಗೆ ಗೊತ್ತಿರತಕ್ಕಂಥಾದ್ದು.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಈಗ ನಮಗೆ ಅವಕಾಶ ಸಿಕ್ಕಿದೆ. ತಾವು ಅವಕಾಶ ಕೊಡಿ.

ಶ್ರೀ ಎಂ.ಸಿ.ನಾಣಯ್ಯ: ಇಬ್ಬರು ಸದಸ್ಯರುಗಲಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಹುದು.

ಶ್ರೀ .ಸಿ.ಆರ್.ಸಗೀರ್ ಆಹಮದ್ : ಮಾನ್ಯ ಸಂಸದೀಯ ಮಂತ್ರಿಗಳೇ.....

ಶ್ರೀ ಎಂ.ಸಿ. ನಾಣಯ್ಯ: ದಯವಿಟ್ಟು ತಾವು ಹೋಗಿಯಪ್ಪ. ಮೊದಲು ನಿಮ್ಮ ನಿಮ್ಮ ಸ್ಥಳಗಳಿಗೆ ಬನ್ನಿ. ಇರತಕ್ಕಂಥ 45 ನಿಮಿಷಗಳಲ್ಲಿ ಎರಡು-ಮೂರು ಜನ ಸದಸ್ಯರು ಮಾತನಾಡಬಹುದು. ಸದನದ ಸಮಯವನ್ನು ಕಳೆಯುವುದು ಬೇಡ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನನ್ನ ಒಂದು ಮನವಿ ಏನೆಂದರೆ ಈಗಾಗಲೇ ಸುರೇಶ್ ಕುಮಾರ್ ಅವರು ಒಂದು ಸಲಹೆ ಮಾಡಿದರು.

ಉಪಾಧ್ಯಕ್ಷರು: ಇದು ಇವತ್ತೇ ಮುಗಿಯುವ ಆಗಿಲ್ಲ. ಎಲ್ಲರೂ ದಯವಿಟ್ಟು ಸಹಕರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಸಲಹೆ ಏನೆಂದರೆ ಇನ್ನೂ ಅನೇಕ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಅದಕ್ಕೆ ನಮ್ಮ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಬೇಕಾದರೆ ಯಾವ ರೀತಿಯಾಗಿ ಇದನ್ನು ಎಕ್ಸಟೆಂಡ್ ಮಾಡಬೇಕೋ, ಎಷ್ಟು ದಿವಸ ಮಾಡಬೇಕು ಹೇಗೆ ಎಂದು ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ಈಗ ಡಿಬೇಟ್ ಅನ್ನು ಮುಗಿಸಿ, ಗಮನ ಸೆಳೆಯುವ ಸೂಚನೆ, ಜಿರೋಅವರ್, ಪ್ರಶ್ನೋತ್ತರ ಎಲ್ಲಾ ಪೆಂಡಿಂಗ್ ಇದೆ. ಅದನ್ನು ತೆಗೆದುಕೊಂಡರೆ ಒಳ್ಳೆಯದು.

(ಗೊಂದಲ)

ಉಪಾಧ್ಯಕ್ಷರು: ಅರ್ಧಗಂಟೆಯಲ್ಲಿ ಎಲ್ಲಿ ಆಗುತ್ತದೆ ?

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ರಾತ್ರಿ ಎಂಟುಗಂಟೆಯಾಗಲಿ, ಸದನ ನಡೆಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಾಲಿಂಗ್ ಅಟೆನ್‌ಶನ್ ಬಹಳ ಮುಖ್ಯ ಇದೆ. ಏಕೆಂದರೆ ಇದ್ದ ಗವರ್ನಮೆಂಟ್ ಆರ್ಡರನ್ನು ವಿತ್‌ಡ್ರಾ ಮಾಡಿ ಹೊಸ ಜಿ.ಒ. ಇಶ್ಯು ಮಾಡಿದ್ದಾರೆ. ಇದರ ಬಗ್ಗೆ ಚರ್ಚೆಯಾಗಬೇಕು. ಅದಕ್ಕೋಸ್ಕರ ನಾವು ಕಾಲಿಂಗ್ ಅಟೆನ್‌ಶನ್ ಹಾಕಿದ್ದುದು, ಅದಕ್ಕೆ ಉತ್ತರ ಬೇಕು. ಅದಕ್ಕಾಗಿ ಪ್ರಶ್ನೋತ್ತರ ಆದಮೇಲೆ ಅವಕಾಶ ಕೊಡುತ್ತೇನೆ ಎಂದರೆ ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಎಂ.ಸಿ.ನಾಣಯ್ಯ: ನಾನು ಅವರನ್ನು ಒಂದು ಕೇಳುತ್ತೇನೆ .....

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ: ನಾವು ಮಾತನಾಡಬಾರದು ಎಂದರೆ ಇಲ್ಲಿ ನಾವು ಏಕೆ ಕುಳಿತುಕೊಳ್ಳಬೇಕು?

ಶ್ರೀ ಎಂ.ಸಿ.ನಾಣಯ್ಯ: ಈಗ ಡಿಬೇಟ್‌ನ್ನು ತಾವು ಕ್ಲೋಸ್ ಮಾಡುವುದಾದರೆ ಬಹುಶಃ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಪುನಃ ಇದನ್ನು ಚರ್ಚೆಮಾಡಿ ಯಾವ ರೀತಿ ಚರ್ಚೆಮಾಡಬೇಕು ಎಂಬ ತೀರ್ಮಾನಕ್ಕೆ ಬರುವುದಾದರೆ ಈ ಚರ್ಚೆಯನ್ನು ನಿಲ್ಲಿಸಬಹುದು. ಹಾಗೆ ಮಾಡಿದರೆ ಮುಂದೆ ನಾವು ತೆಗೆದುಕೊಳ್ಳಬೇಕಾಗಿರತಕ್ಕಂಥಾದ್ದು ಪ್ರಶ್ನೋತ್ತರ ತೆಗೆದುಕೊಂಡು ಆದಮೇಲೆ ಬಾಕಿ ಇರತಕ್ಕಂಥ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರಶ್ನೋತ್ತರ ಎಂದರೆ ಅದು ಒಂದು-ಒಂದೂವರೆ ಗಂಟೆಕಾಲ ನಡೆಯಬೇಕಾಗುತ್ತದೆ. ನಾನು ಈಗಾಗಲೇ ತಮ್ಮನ್ನು ದಯವಿಟ್ಟು ಆರೂವರೆ ಗಂಟೆಗೆ ಸದನವನ್ನು ಮುಂದೂಡಬೇಕೆಂದು ಕೇಳಿಕೊಂಡಿದ್ದೇನೆ. ಆದರೆ ಆರೂವರೆ ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುವುದಾದರೆ ಮಾಡೋಣ. ಇದಕ್ಕೆ ನಮ್ಮ ಅಭ್ಯಂತರ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರೂವರೆ ಗಂಟೆಗೇ ಏಕೆ? ಕಾಲಿಂಗ್ ಅಟೆನ್‌ಶನ್ ಬಹಳ ಮುಖ್ಯ ಇದೆ. ಇಡೀ ಕರ್ನಾಟಕದಲ್ಲಿ ಇದರಿಂದ ಬೆಂಕಿಹತ್ತಿಕೊಂಡಂತಾಗಿದೆ. ಎಲ್ಲಾ ಕಡೆ ಗಲಾಟೆ ಪ್ರಾರಂಭವಾಗಿದೆ.

ಶ್ರೀ ಎಂ.ಸಿ. ನಾಣಯ್ಯ: ಮೊದಲು ಪ್ರಶ್ನೋತ್ತರ ಆಗಲೇಬೇಕಲ್ಲಾ ಪ್ರಶ್ನೋತ್ತರ ಲ್ಯಾಪ್ಸ್ ಆದರೆ ಎಲ್ಲವೂ ಲ್ಯಾಪ್ಸ್ ಆಗುತ್ತದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಇಡೀ ಕರ್ನಾಟಕದಲ್ಲಿ ಬೆಂಕಿ ಬಿದ್ದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಏನಾಗಿದೆ ಎಂದರೆ ಯಾರೂ ಹೇಳುವವರು ಇಲ್ಲ, ಕೇಳುವವರು ಇಲ್ಲ, ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸುವ ಹಾಗಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಪ್ರಶ್ನೋತ್ತರ ವೇಳೆಯನ್ನು ಲ್ಯಾಪ್ಸ್ ಮಾಡಿದರೆ ಉಳಿದ ಎಲ್ಲಾ ಕಾರ್ಯಕಲಾಪಗಳನ್ನೂ ಲ್ಯಾಪ್ಸ್ ಮಾಡಬೇಕಾಗುತ್ತದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಎಲ್ಲಾ ತರಾತುರಿಯಲ್ಲಿ ಮೂರೇ ದಿನಗಳಲ್ಲಿ 400 ಜನರಿಗೆ ಪ್ರಮೋಶನ್ ಕೊಟ್ಟು ಇಟ್ಟಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು: ರೂಲ್ಸ್ ಬಿಟ್ಟು ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರೇನೋ ಸಭೆ ಕರೆದಿದ್ದಾರೆ, ಸರಿ. ಅಲ್ಲಿ ನಮ್ಮ ಪ್ರಶ್ನೆಗ ಉತ್ತರ ಯಾರು ಹೇಳಬೇಕು? ಹೊರಗಡೆ ಉತ್ತರ ಸಿಗುವುದಿಲ್ಲ. ಜನ ರೆಪ್ರಸೆಂಟೇಶನ್ ಮಾಡಿದರೂ ಅದಕ್ಕೆ ಉತ್ತರ ಇಲ್ಲ. ಜನ ಎಜಿಟೇಷನ್ ಮಾಡಿದರೂ ಉತ್ತರ ಇಲ್ಲ . ನಾವು ಏನೂ ಮಾಡಬೇಕು?

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಸುಪ್ರೀಂ ಕೋರ್ಟ್ ವಿರುದ್ಧವಾಗಿ ನಡೆದುಕೊಂಡು ಅನ್ಯಾಯ ಮಾಡುತ್ತಿದ್ದಾರೆ .

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಪರವಾಗಿ ಉತ್ತರ ಕೊಡುತ್ತೇವೆ. ಆದರೆ ಸಂಸಧೀಯ ಮಂತ್ರಿಗಳು ಹೇಳಿದಂತೆ ಕೆಲವು ತಾಂತ್ರಿಕ ತೊಂದರೆಗಳು ಇವೆ. ಮಾನ್ಯ ಸುರೇಶ್‌ಕುಮಾರ್ ಅವರು ಹೇಳಿದಂತೆ ಇವತ್ತೇ ಮೂರು - ನಾಲ್ಕು ಜನರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಸಮಯದ ಅಭಾವ ಇದ್ದರೆ ನಮ್ಮ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕಲೆತು ಮರುಹೊಂದಾಣಿಕೆ ಮಾಡಿ ಸಮಯ ನಿಗದಿ ಪಡಿಸುವುದಕ್ಕೆ ಅವರು ಪ್ರಯತ್ನ ಮಾಡಬಹುದು. ಆದಾದ ನಂತರ ಉತ್ತರ ಕೊಡಬೇಕು ಎಂದು ಒಂದು ಸಲಹೆಯನ್ನು ತಾವು ಏನು ಹೇಳಿದ್ದೀರಿ, ಮುಖ್ಯಮಂತ್ರಿಗಳು ಬಂದನಂತರ ಅದಕ್ಕೆ ಉತ್ತರ ಕೊಡುತ್ತಾರೆ. ಎರಡನೇಯದಾಗಿ ಪ್ರಶ್ನೋತ್ತರ ವೇಳೆಯನ್ನು ತಕ್ಷಣ ನಾವು ತೆಗೆದು ಕೊಳ್ಳಬೇಕಾಗುತ್ತದೆ. ಪ್ರಶ್ನೋತ್ತರ ಆದಮೇಲೆ ಗಮನ ಸೆಳೆಯುವ ಸೂಚನೆ ಬರುತ್ತದೆ. ಆದೆರೆ ಇವತ್ತು ಒಂದು ಕಾರಣ ಇರುವುದರಿಂದ ಆರೂವರೆ ಗಂಟೆಗೆ ಸದನವನ್ನು ಮುಕ್ತಾಯಗೊಳಿಸಬೇಕು ಎಂದು ಈಗಾಗಲೇ ನಾವು ಕೇಳಿಕೊಂಡಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:ಕಾಲಿಂಗ್ ಅಟೆನಷನ್ ಅನ್ನು ಮೊದಲು ತೆಗೆದುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ: ಹಾಗೆ ಆಗುವುದಿಲ್ಲ. ನಿಯಮಾವಳಿ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಹಾಗೆ ಏಕೆ ಮಾಡಬಾರದು?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನೋಡಿ ಪ್ರಶ್ನೋತ್ತರ ಆದ ಮೇಲೆ ಗಮನ ಸೆಳೆಯುವ ವಿಚಾರಗಳನ್ನು ತೆಗೆದರೆ ಸರ್ಕಾರ ಉತ್ತರ ಕೊಡುತ್ತದೆ. ಪ್ರಶ್ನೋತ್ತರ ವೇಳೆ ಮಾಡದೆ ಅದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮೊದಲು ಪ್ರಶ್ನೋತ್ತರ ವೇಳೆಆಗಲೇ ಬೇಕಾಗುತ್ತದೆ . ಪ್ರ ಶ್ನೋತ್ತರ ವೇಳೆಯನ್ನು ಕೈ ಬಿಟ್ಟರೆ ಎಲ್ಲಾ ಪ್ರಸ್ತಾವನೆ ಯನ್ನೂ ಕೈ ಬಿಡಬೇಕಾಗುತ್ತದೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ನೀವು ತರಾತುರಿಯಲ್ಲಿ. ಮೂರು ದಿನದಲ್ಲಿ ಏನೇನೋ ಮಾಡುತ್ತೀರಿ.

ಉಪಾಧ್ಯಕ್ಷರು : ರೂಲ್ಸ್ ಬಿಟ್ಟು ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ. ಈಗ ಪ್ರಶ್ನೋತ್ತರವನ್ನು ಕೈಗೆತ್ತಿಕೊಂಡು, ಮಾನ್ಯ ಉಪಾಧ್ಯಕ್ಷರ ಆಜ್ಞೆ ಪ್ರಕಾರ ಪ್ರಶ್ನೆಗಳಾದ ಮೇಲೆ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ. ಆದರೆ, ಇಂದು ಏಳೂವರೆ ಗಂಟೆಗೆ ಬೇರೆ ಕಾರ್ಯಕ್ರಮ ಇರುವುದರಿಂದ, ಆರೂವರೆ ಗಂಟೆಯ ಹೊತ್ತಿಗೆ ಸದನವನ್ನು ಮುಂದೂಡಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು: ತಾವು ತಮ್ಮ ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ. ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಇವತ್ತು ನನ್ನ ಪ್ರಶ್ನೆ ಬಂದಿದೆ, ಅದಕ್ಕೂ ಉತ್ತರ ಬಂದಿಲ್ಲ. ಇನ್ನೊಂದು ಅತ್ಯಂತ ಮುಖ್ಯವಾದ ಪ್ರಶ್ನೆಗೂ ಉತ್ತರ ಕೊಟ್ಟಿಲ್ಲ. ಗಮನ ಸೆಳೆಯುವ ಸೂಚನೆಗೂ ಕೊಟ್ಟಿಲ್ಲ. ಉದ್ದೇಶಪೂರ್ವಕವಾಗಿ ಈ ರೀತಿಯಾಗುತ್ತಿದೆ. ನಾನು ಒಂದು ಪಾರ್ಟಿ ಅಧ್ಯಕ್ಷ ಇದ್ದೇನೆ. ನನಗೆ ಸದನದಲ್ಲಿ ಅನ್ಯಾಯವಾಗುತ್ತಿದೆ. ಸರ್ಕಾರದವರು ತಪ್ಪಿಸುವುದುಕ್ಕೆ ಏನೇನೋ ಮಾಡುತ್ತಿದ್ದಾರೆ. ಇವರಿಗೇನು ನೈತಿಕ ಅಧಿಕಾರ ಇದೆಯೋ ನೋಡೋಣ.

ಶ್ರೀ ಎಂ.ಪಿ.ಪ್ರಕಾಶ್: ನೀವು ನೈತಿಕ ಅಧಿಕಾರದ ಪ್ರಶ್ನೆ ಮಾಡಬೇಡಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:ನಿಮಗೋ ಏನೂ ಅಧಿಕಾರ ಇಲ್ಲ. ಇಡೀ ಒಂದು ಸಮಾಜಕ್ಕೆ ಅನ್ಯಾಯ ಮಾಡಿ, ಚೇರ್ ಮೇಲೆ ಕುಳಿತಿದೆ ಈ ಸರ್ಕಾರ. ಇದು ಸಮಾಜವಾದಿ ಸರ್ಕಾರ ನೀವು ಸೋಷಿಯಲ್ ಜಸ್ಟೀಸ್ ಮಾತನಾಡುತ್ತೀರಿ. ಮೋಸ್ಟ್ ಕಮ್ಯುನಲ್ ಸರ್ಕಾರ. ಮೋಸ್ಟ್ ಜಾತಿವಾದಿ ರಾಜಕೀಯ ಮಾಡುತ್ತಿದ್ದೀರಿ.

ಶ್ರೀ ಎಂ.ಪಿ.ಪ್ರಕಾಶ್ : ಅದು ನಿಮ್ಮ ತಪ್ಪು ಅಭಿಪ್ರಾಯ.....

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ನೀವು ಅಲ್ಪಸಂಖ್ಯಾತರಿಗೆ ಏನೇನು ಮಾಡುತ್ತಿದ್ದೀರಿ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನೇನು ಮಾಡುತ್ತಿದ್ದೀರಿ .....

ಶ್ರೀ ಎಂ.ಪಿ.ಪ್ರಕಾಶ್ : ಯು.ಪಿ.ಯಲ್ಲಿ ನೋಡಿದ್ದೇವೆ ಮತ್ತು ಬೇರೆ ಕಡೆಗಳಲ್ಲೂ ನೋಡಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್ : ಸಾಮಾಜಿಕ ನ್ಯಾಯ ಹೇಳುವ ನಿಮ್ಮ ಪಕ್ಷ ಉತ್ತರ ಪ್ರದೇಶದಲ್ಲಿ ಏನು ಮಾಡಿದೆ ಎಂಬುದು ಗೊತ್ತಿದೆ.

-ಗೊಂದಲ-

ಉಪಾಧ್ಯಕ್ಷರು: ತಾವು, ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ

-ಗೊಂದಲ-

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಉದ್ದೇಶಪೂರ್ವಕವಾಗಿ ನಮಗೆ ಈ ರೀತಿ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು : ನಿಯಮಾವಳಿ ಬಿಟ್ಟು ಏನು ಮಾಡಲಿಕ್ಕೆ ಸಾಧ್ಯವಿಲ್ಲ .....

-ಗೊಂದಲ-

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಡಿಬೇಟ್ ಕೂಡ ಕಂಪ್ಲೀಟ್ ಆಗಿಲ್ಲ. ರಾಜ್ಯಪಾಲರ ಭಾಷಣದ ಮೇಲೆಯೂ ಕೂಡ ಸಾಕಷ್ಟು ಜನ ಮಾತನಾಡುವವರಿದ್ದಾರೆ. ಸಿಂಗಲ್ ಪಾರ್ಟಿಯವರೂ ಇದ್ದಾರೆ. ಆಮೇಲೆ ಬಿಜೆಪಿ ಪಾರ್ಟಿಯಲ್ಲೂ ಮಾತನಾಡುವವರಿದ್ದಾರೆ. ಕಾಂಗ್ರೆಸ್‌ನಲ್ಲೂ ಇದ್ದಾರೆ, ಕೆಲವು ಇಂಡಿಪೆಂಡೆಂಟ್ಸ್ ಸದಸ್ಯರೂ ಮಾತನಾಡುವವರಿದ್ದಾರೆ. ಅದಕ್ಕಂತೂ ಸಮಯ ಬೇಕೇಬೇಕು. ಎರಡನೆಯದೇನೆಂದರೆ. ಈಗ ಪ್ರಶ್ನೋತ್ತರ ಇದೆ, ಗಮನ ಸೆಳೆಯುವ ಸೂಚನೆ ಇದೆ, ಬೇರೆ ವಿಷಯ ಕೂಡ ಇದೆ. ಕೆಲವು ಅತ್ಯಂತ ತುರ್ತು ಮತ್ತು ಗಂಭೀರವಾದಂಥ ವಿಷಯಗಳು ಇವೆ. ಅವುಗಳನ್ನು ನಾವು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಸದನದಲ್ಲಿ ಪ್ರಸ್ತಾಪ ಮಾಡುವುದು ಕೇವಲ ಪ್ರಚಾರಕ್ಕೋಸ್ಕರ ಅಥವಾ ಬೇರೆ ದೃಷ್ಟಿಯಿಂದ ಅಲ್ಲ. ಪ್ರಸ್ತಾಪ ಮಾಡತಕ್ಕಂತಾದ್ದು ಒಂದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ. ಮತ್ತು ಇಲ್ಲಿಯವರೆಗೆ ಯಾವುದೋ ಒಂದು ಸಮಸ್ಯೆ ಸುಮ್ಮನೆ ಇತ್ತು. ಬಿದ್ದು ಹೋಗುವಂಥ ಸಮಸ್ಯೆಗೆ ಇವರು ಜನರನ್ನು ಎತ್ತಿಕಟ್ಟಿ, ಇವತ್ತು ಹೊಡೆದಾಡತಕ್ಕಂಥ ಏನು ಪ್ರಯತ್ನ ಮಾಡುತ್ತಿದ್ದಾರೆ, ಅದರ ಬಗ್ಗೆಯೂ ಕೂಡ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಉತ್ತರ ಇರಬಹುದು, ಆದರೆ, ನಿಮ್ಮ ಉತ್ತರದಿಂದ, ಜನರಿಗೆ ನ್ಯಾಯ ಸಿಗುತ್ತದೆಂದರೆ ಅದನ್ನು ಒಪ್ಪಿಕೊಳ್ಳೋಣ. ಆದರೆ, ನೀವು ಯಾವುದೇ ಒಂದು ಸಾಮಾಜಿಕ ನ್ಯಾಯದ ಅಡಿಯಲ್ಲಿ ಮಾನ್ಯ ದೇವರಾಜ ಅರಸುರವರು ಮಾಡಿದಂಥ ಒಂದು ಆಜ್ಞೆಯನ್ನು 22 ವರ್ಷವಾದ ಮೇಲೆ ನೀವು ವಿತ್ ಡ್ರಾ ಮಾಡಿಕೊಳ್ಳುತ್ತೇವೆಂದರೆ, ನಾವು ಎಲ್ಲಿ ಪ್ರತಿಭಟನೆ ಮಾಡಬೇಕು ಎಲ್ಲಿ ಮಾತನಾಡಬೇಕು, ಯಾರಿಗೆ ರೆಪ್ರಸೆಂಟೇಷನ್ ಕೊಡಬೇಕು, ಎಲ್ಲಿ ಹೇಳಿಕೊಳ್ಳಬೇಕು ಎಂದು ತಾವೇ ಹೇಳಿ. ಅದಕ್ಕಾಗಿ , ಪ್ರಶ್ನೋತ್ತರವಾದ ಮೇಲೆ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನಾವು ಕುಳಿತು ಕೋಳೋಣ. ನೀವು 6 ಗಂಟೆಗೆ ಹೋಗಬೇಕು, ಆರೂವರೆ ಗಂಟೆಗೆ ಹೋಗಬೇಕೆಂದು ಹೇಳಿದರೆ, ಯಾವುದೇ ಚರ್ಚೆಯೂ ಆಗುವುದಿಲ್ಲ. ಮತ್ತು ಉತ್ತರವೂ ಸಿಗುವುದಿಲ್ಲ ನೀವು ಆಗಬಹುದೆಂದರೆ ಹೇಳಿ, ಏನಾದರೊಂದು ತೀರ್ಮಾನಕ್ಕೆ ಬರಬೇಕಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ನಮಗೆ ಕೊಟ್ಟಿರುವ ಕಾರ್ಯಕಲಾಪಗಳ ಪ್ರಕಾರ, ಈಗಾಗಲೇ ಒಂದು ದಿವಸದ ಪ್ರಶ್ನೋತ್ತರ ಲ್ಯಾಪ್ಸ್ ಆಗಿರುತ್ತದೆ. ಅನೇಕರಿಗೆ ಚರ್ಚೆಯಲ್ಲಿ ಭಾಗವಹಿಸಿವುದಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ಅವರು ಯಾವುದೋ ಒಂದು ಪ್ರಶ್ನೆ ಹಾಕಿರುತ್ತಾರೆ. ಆ ಪ್ರಶ್ನೆಯನ್ನು ಕೇಳುವ ಮುಖಾಂತರವಾದರೂ ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದ ಉತ್ತರವನ್ನು ತೆಗೆದುಕೊಂಡು ಹೋಗಬೇಕು. ಈಗ ನಾವು ಚರ್ಚೆಗೆ ಪ್ರಾರಂಭ ಮಾಡಿದರೆ, ಅದು ಗಮನ ಸೆಳೆಯುವ ಸೂಚನೆ ಆಗಬಹುದು ಅಥವಾ ಯಾವುದೇ ಆಗಬಹುದು. ಇವುಗಳಿಗೆ ನಮಗೆ ಈಗಲೇ ಉತ್ತರ ಸಿಕ್ಕಿ, ಒಂದು ನಿರ್ಧಾರಕ್ಕೆ ಬರುವುದು ಬಹಳ ಕಷ್ಟ ಇದೆ. ನಾನು ತಮ್ಮ ಮುಖಾಂತರ ಸಭೆಗೆ ಅಪೀಲು ಮಾಡಿಕೊಳ್ಳುವುದು, ದಯವಿಟ್ಟು ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳಿ. ಇವತ್ತಿನ ಪ್ರಶ್ನೆಗಳನ್ನು ಮುಗಿಸಿ, ನಂತರ ನಾವು ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮ ವಿಷಯವೂ ಇವತ್ತಿನ ಅಜೆಂಡಾದಲ್ಲಿ ಇದೆ, ಇದು ಏಕೆ ಬೇಡ? ಅಜೆಂಡಾ ಕಂಪ್ಲೀಟ್ ಮಾಡೋಣ ಎನ್ನುವುದಾದರೆ ಕೂಡಬಹುದು. ಬರೀ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ, ಗಮನ ಸೆಳೆಯುವ ಸೂಚನೆಬೇಡ ಎಂದು ಹೇಳಿದರೆ ಹೇಗೆ? ಅದಕ್ಕೆ ಒಂದು ತೀರ್ಮಾನವಾಗಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೇ, ಪ್ರಶ್ನೋತ್ತರವಾದ ನಂತರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುವುದರಲ್ಲಿ ಏನು ತಪ್ಪಿದೆ?

ಉಪಾಧ್ಯಕ್ಷರು : ಸಮಯದ ಅಭಾವ ಇದೆ, ಅರ್ಧಗಂಟೆಯಲ್ಲಿ ಪ್ರಶ್ನೋತ್ತರ ಮುಗಿಯುವುದಿಲ್ಲ. ನಿಮ್ಮ ಕಾಲಿಂಗ್ ಅಟೆನ್ಶನ್ 6-30ರೊಳಗೆ ಮುಗಿಯುತ್ತದೆಯೇ?.....

ಶ್ರೀ ಮಲ್ಲಿಕಾರ್ಜುನ ಖರ್ಗೆ: 6-30 ರೊಳಗೆ ಮುಗಿಯುವುದಿಲ್ಲ.

ಉಪಾಧ್ಯಕ್ಷರು: ಎಮರ್ಜೆನ್ಸಿ ಇದ್ದಾಗ, ನೀವು ಸ್ವಲ್ಪ ಕೋಆಪರೇಟ್ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಮರ್ಜೆನ್ಸಿ ಅಲ್ಲ, ಪ್ರಶ್ನೆಯೇ ಲ್ಯಾಪ್ಸ್ ಆಗುತ್ತದೆ. ಇದಕ್ಕೆ ಏನಾದರೊಂದು ಪರಿಹಾರ ಕಂಡುಹಿಡಿಯುತ್ತೇವೆಂದು ಹೇಳಿದರೆ, ಕೂಡುತ್ತೇವೆ.

ಶ್ರೀ ಡಿ ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿ.....

ಶ್ರೀ ಬಿ.ಬಿ. ಶಿವಪ್ಪ: ನಿನ್ನೆ ಕೂಡ ಅಜೆಂಡಾವನ್ನೆಲ್ಲಾ ಮುಂದೆ ಕಳುಹಿಸಿ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ಮಾಡಿಸಿದ್ದೀರಿ. ಮತ್ತೆ ಇವತ್ತೂ ಕೂಡ ಅದೇ ಮಾಡುತ್ತಿದ್ದೀರಿ. ನಿನ್ನೆ ನೀವು ಆಶ್ವಾಸನೆ ಕೊಟ್ಟ ರೀತಿಯಲ್ಲಿ ಪ್ರಪ್ರಥಮವಾಗಿ ಇವತ್ತು ನಮ್ಮ ಆ ಪ್ರಶ್ನೆಯನ್ನು ತಾವು ಕೈಗೆತ್ತಿಕೊಳ್ಳಬೇಕು. ನಿನ್ನೆ ಕೊನೆಯಲ್ಲಿದ್ದಂಥ ಆ ವಿಷಯವನ್ನು ಮುಂದೆ ನೂಕಿ, ನಂಜೇಗೌಡರು ಭಾಷಣ ಮಾಡಲಿಕ್ಕೆ ಅವಕಾಶ ಕಲ್ಪಿಸಿದಿರಿ. ಅದಕ್ಕಿಂತ ಮೊದಲು ನನ್ನ ಆ ಸಬ್ಜಕ್ಟ್ ಬಂದಿತ್ತು. ನಿನ್ನೆ ಅಧ್ಯಕ್ಷರು, ನಾಳೆ ಕೊಡುತ್ತೇವೆಂದು ಹೇಳಿದರು. ಹಾಗಿದ್ದಮೇಲೆ, ಇವತ್ತು ಕೊಡಬೇಕಲ್ಲಾ ಇವತ್ತು ತಮ್ಮ ಆದೇಶದ ಪ್ರಕಾರ ನೋಡಿದರೆ, ನಮಗೆ ಇವತ್ತು ಕೂಡ ಸಿಗುವುದಿಲ್ಲ. ಹಾಗಾದರೆ, ಮತ್ತೆ ನಮಗೆ ನಾಳೆ ಕೊಡುತ್ತೀರಾ?...

ಉಪಾಧ್ಯಕ್ಷರು: ನಾಳೆ ಕೊಡುವುದಕ್ಕಾಗುವುದಿಲ್ಲ, ನಾಳೆ ಬಜೆಟ್ ಮಂಡನೆ ಇರುವಾಗ ಹೇಗೆ ಕೊಡುವುದಕ್ಕಾಗುತ್ತದೆ?

ಶ್ರೀ ಬಿ.ಬಿ.ಶಿವಪ್ಪ : ಹಾಗಿದ್ದ ಮೇಲೆ ಪ್ರೈಯಾರಿಟಿ ಮೇಲೆ ಇವತ್ತು ನಾವು ಮಾತನಾಡಲಿಕ್ಕೆ ಅವಕಾಶ ಕೊಡಲೇ ಬೇಕು. ಅಧ್ಯಕ್ಷರೂ ಕೂಡ ನಿನ್ನೆ ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಹಂತ ಹಂತವಾಗಿ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಉಪಾಧ್ಯಕ್ಷರೇ, ಅವರು ಕೇಳಿರತಕ್ಕ ಗಮನ ಸೆಳೆಯುವ ಸೂಚನೆ ಮತ್ತು ಇತರೆ ವಿಚಾರಗಳು ಏನೂ ಲ್ಯಾಪ್ಸ್ ಆಗುವುದಿಲ್ಲ. ಈಗ ನಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ನಿಮ್ಮನ್ನು ನಾನು ಈಗಾಗಲೇ ವಿನಂತಿ ಮಾಡಿದ್ದೇನೆ. ಆರೂವರೆ ಅಲ್ಲದಿದ್ದರೂ

7 ಗಂಟೆಗಾದರೂ ನಮ್ಮನ್ನು ಬಿಡುಗಡೆ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದಾರೆ, ನಾವು ಹೋಗಬೇಕಾಗುತ್ತದೆ ಎಂದು ವಿನಂತಿ ಮಾಡಿಕೊಂಡಿದ್ದೇನೆ. ತಾವು ಎತ್ತಿರಕ್ಕೆ ಗಮನ ಸೆಳೆಯುವ ಸೂಚನೆಯನ್ನು ಪೈಯಾರಿಟಿ ಮೇಲೆ ಇನ್ನೊಂದು ದಿವಸ ತೆಗೆದುಕೊಂಡು ಚರ್ಚೆ ಮಾಡೋಣ. ಬೇಡವೆಂದು ಯಾರೂ ಹೇಳುವುದಿಲ್ಲ. ಇದು ಯಾವುದೂ ಕೂಡಲ್ಯಾಫ್ಸ್ ಆಗುವುದಿಲ್ಲ. ಇವೆಲ್ಲವನ್ನೂ ಕೂಡ ಮುಂದೂಡುವುದು ಅಷ್ಟೆ. ಶ್ರೀಮಾನ್ ಶಿವಪ್ಪನವರು ಮತ್ತು ಬಸವರಾಜ್‌ರವರು ಎತ್ತಿರತಕ್ಕ ವಿಚಾರವು ಕೂಡ ನಮ್ಮ ಮಡಿಕೇರಿಗೆ ಸಂಬಂಧ ಪಟ್ಟಿರುವಂತಾದ್ದು, ಸರ್ಕಾರದಿಂದ ಉತ್ತರವನ್ನು ಹೇಳುತ್ತೇವೆ, ನಿಮಗೆ ಸಮಾಧಾನಕರವಾದ ಉತ್ತರವನ್ನು ಸರ್ಕಾರದಿಂದ ಕೊಡೋಣ ಶ್ರೀ ಮಾನ್ ಖರ್ಗೆಯವರು ಎತ್ತಿರತಕ್ಕಂತ ವಿಚಾರವೂ ಅಷ್ಟೆ. ಇದು ಮೀಸಲಾತಿಗೆ ಸಂಬಂಧಪಟ್ಟಿರುವ ವಿಚಾರ. ಇದೂಕೂಡ ಸದನದಲ್ಲಿ ಚರ್ಚೆಯಾಗಬೇಕು. ಸರ್ಕಾರದಿಂದ ಅದಕ್ಕೂ ಉತ್ತರವನ್ನು ಕೊಡುತ್ತೇವೆ. ಆದ್ದರಿಂದ, ನಾಳೆ ಬಜೆಟ್ ಇದೆ. ಈ ಬಜೆಟ್ ಆದಮೇಲೆ ಸಭೆಯನ್ನು ಮುಂದೂಡ ಬೇಕಾಗುತ್ತದೆ. ನಾವು ಪುನಃ ಸೇರುವುದು 21ನೇ ತಾರೀಖು. ಆದ್ದರಿಂದ, ಈ ವಿಚಾರಗಳೆಲ್ಲವನ್ನೂ ಕೂಡ 21 ತಾರೀಖು ಅಥವಾ 22ನೇ ತಾರೀಖಿನಲ್ಲಿ ತೆಗೆದುಕೊಂಡು ಚರ್ಚೆ ಮಾಡೋಣ ಬೇಡ ಎಂದು ಹೇಳುವುದಕ್ಕೆ ನಾವು ತಯಾರಾಗಿಲ್ಲ. ಈಗ ಸಮಯದ ಅಭಾವ ಇದ್ದುದರಿಂದ ಈ ಪ್ರಶ್ನೆ ಬಂತೇ ಹೊರತು, ಸಮಯವಿದ್ದಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಮಾನ್ಯ ಶಿವಪ್ಪನವರಿಗೆ ಗೊತ್ತಿದೆ. 3-4 ದಿವಸಗಳಿಂದ ಚರ್ಚೆ ಮಾಡಿ, ಬಹಳಷ್ಟು ಜನ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದರಿಂದ, ಇವತ್ತು ಇನ್ನೂ ಕೆಲವರುಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಆದರೂ ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದನ್ನು ಚರ್ಚೆ ಮಾಡಿ, ಬಜೆಟ್ ಕೂಡ ಮಾಡುತ್ತೇವೆ. ಅದರ ಜೊತೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮಾಡತಕ್ಕ ಚರ್ಚೆಯ ಬಗ್ಗೆಯೂ ಅಲ್ಲ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅದರ ಜೊತೆಗೆ, ಗಮನ ಸೆಳೆಯುವ ಸೂಚನೆಗಳು ಮತ್ತು ಇತರ ವಿಚಾರಗಳು ಯಾವುದುಂಟು, ಅವುಗಳನ್ನು ನಾವು ಪುನಃ ಸದನ ಸೇರುವ ಸಂದರ್ಭದಲ್ಲಿ, ಯಾವ ಯಾವ ದಿವಸ ಹಾಕಿಕೊಳ್ಳಬೇಕೆಂದು, ಚರ್ಚೆ ಮಾಡಿ ಅದಕ್ಕೆ ಉತ್ತರವನ್ನು ನಾವು ಕೊಡುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ: ತಾವು ಹೇಳುವ ರೀತಿಗೆ ನಾವು ಬರುವುದಾದರೆ, ಸಂಸದೀಯ ಮಂತ್ರಿಗಳು ಇದರ ಅರ್ಥವನ್ನು ಹೇಳಬೇಕಾಗುತ್ತದೆ. ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪ ಕಾಲಾವಧಿ ಚರ್ಚೆ ಇದರ ಅರ್ಥ ಏನು? ಈ ಜರೂರನ್ನು 21ನೇ ತಾರೀಖಿನವರೆಗೆ ಮುಂದೂಡಿಸುವುದಕ್ಕೆ ಹೇಳೋಣವೇ? ಇದು ಗಮನ ಸೆಳೆಯುವ ಸೂಚನೆ ಅಲ್ಲ.

ಶ್ರೀ ಎಂ.ಸಿ. ನಾಣಯ್ಯ: ಮ್ಯಾಟರ್ ಆಫ್ ಪಬ್ಲಿಕ್ ಇಂಪಾರ್ಟೆನ್ಸ್ ಎಂದು ಹೇಳುವ ಎಲ್ಲವೂ ಜರೂರೇ. ಆದ್ದರಿಂದ ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ಕಡೆಯ ಪಕ್ಷ ಏಳು ಗಂಟೆಯೊಳಗಾಗಿ ಪ್ರಶ್ನೋತ್ತರಗಳನ್ನು ಮುಗಿಸೋಣ. ಮತ್ತೆ 22ನೇ ತಾರೀಖು ಸಮಾವೇಶಗೊಂಡಾಗ ತಮ್ಮ ಬಾಕಿ ಇರುವ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಾಣಯ್ಯನವರು ಹೇಳಿದ ವಿಚಾರದ ಬಗ್ಗೆ ನಾವು ಒಪ್ಪಿಕೊಳ್ಳುವುದಾಗಿದ್ದರೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು

ಹೇಳಬಯಸುತ್ತೇನೆ. ಅದಕ್ಕೆ ತಾವು ಉತ್ತರ ಕೊಟ್ಟರೆ ನಾನು ತಾವು ಹೇಳಿದ್ದಕ್ಕೆ ಒಪ್ಪಿಕೊಳ್ಳುತ್ತೇನೆ. ಸರ್ಕಾರಿ ಕೆಲಸಗಳನ್ನು ಮಾಡುವಾಗ ಕಡತದ ಮೇಲೆ ಜರೂರು, ಅತೀ ಜರೂರು, ಇಂದೇ ಎಂದು ನೋಟ್‌ನ್ನು ಹಾಕುತ್ತೀರಿ. ಈ ರೀತಿ ನೋಟನ್ನು ಹಾಕಿ ಮುಖ್ಯಮಂತ್ರಿಗಳ ಕಛೇರಿಯಿಂದ ಕಂದಾಯ ಇಲಾಖೆಗೆ ಒಂದು ಕಡತವನ್ನು ಕಳುಹಿಸುತ್ತಾರೆ. ಮುರ್ನಾಕು ತಿಂಗಳು ಆ ರೀತಿ ಜರೂರು, ಅತೀ ಜರೂರು ಎಂದೆಲ್ಲಾ ಬರೆದಮೇಲೆ ಕೊನೆಯದಾಗಿ ' ಇಂದೇ' ಎಂದು ಮುಖ್ಯಮಂತ್ರಿಗಳ ಕಛೇರಿಯಿಂದ ಬರೆದು ಕಳುಹಿಸಲಾಗುತ್ತದೆ. ಮುಖ್ಯ ಮಂತ್ರಿಗಳ ಕಛೇರಿಗೆ ಮೂರು ತಿಂಗಳುಗಳಾದರೂ ಕಡತ ಬರಲಿಲ್ಲ. ಈ ರೀತಿಯಾಗುತ್ತಿರುವಾಗ ಮಾನ್ಯ ನಾಣಯ್ಯನವರು 22ನೇ ತಾರೀಖು ಇದರ ಬಗ್ಗೆ ಅವಕಾಶ ಕೊಡುವುದಾಗಿ ಹೇಳುತ್ತಾರೆ. ಅಂದು ನಾವು ಬೆಳಗಿನಿಂದ ಸಂಜೆಯವರೆಗೆ ಕಾಯ್ದುಕೊಂಡು ಕೂರಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ : ತಾವು ಹಿರಿಯ ಸದಸ್ಯರಾಗಿದ್ದೀರಿ. ಯಾವ್ಯಾವ ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿ ಸರ್ಕಾರದಿಂದ ಉತ್ತರವನ್ನು ಪಡೆಯಬೇಕೋ ಅದನ್ನು ಮಾಡಲೇ ಬೇಕಾಗುತ್ತದೆ. ಇವತ್ತು ಪ್ರಶ್ನೋತ್ತರ ಆಗದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಆದರೆ ಗಮನಸೆಳೆಯುವ ಸೂಚನೆ ಮತ್ತು ಇತರ ವಿಚಾರಗಳನ್ನು ಪ್ರತಿ ದಿವಸ ಮುಂದಕ್ಕೆ ಹಾಕಿಕೊಂಡು ಹೋಗಲು ಅವಕಾಶವಿದೆ. ಆದರೆ ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕಲು ಅವಕಾಶವಿಲ್ಲ. ಆದ್ದರಿಂದ ಇಂದು ಮೊದಲು ಪ್ರಶ್ನೋತ್ತರಗಳನ್ನು ಚರ್ಚೆಗೆ ತೆಗೆದುಕೊಂಡು ಬಾಕಿ ವಿಚಾರಗಳ ಬಗ್ಗೆ ಮುಂದಿನ ದಿವಸಗಳಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ತಮ್ಮ ಮಾತನ್ನು ಒಪ್ಪಿಕೊಳ್ಳುತ್ತೇವೆ. ಇವತ್ತು ಪ್ರಶ್ನೋತ್ತರ ತೆಗೆದುಕೊಂಡು ಅನಂತರ 22 ರಂದು ಸಮಾವೇಶಗೊಳ್ಳುವಾಗ ಪ್ಲೆಯಾರಿಟಿ ಬೇಸಿಸ್ ಮೇಲೆ ಇಂದು ಬಾಕಿ ಇರುವ ವಿಚಾರಗಳ ಬಗ್ಗೆ ತೆಗದುಕೊಳ್ಳಬೇಕು.

ಶ್ರೀ ಎಂ.ಸಿ. ನಾಣಯ್ಯ : ಖಂಡಿತವಾಗಿ ಹಾಗೆಯೇ ಮಾಡೋಣ. ಇವತ್ತು ನಮ್ಮ ಅಜಂಡಾದಲ್ಲಿರುವ ಗಮನಸೆಳೆಯುವ ಸೂಚನೆಗಳು ಮತ್ತು ಇತರ ಯಾವ್ಯಾವ ವಿಚಾರಗಳಿವೆ ಅವೆಲ್ಲವನ್ನು 22ನೇ ತಾರೀಖು ಪ್ಲೆಯಾರಿಟಿಯಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಇನ್ನೂ ಐದಾರು ಜನರಿದ್ದೇವೆ. ಅವರಿಗೆ ಮಾತನಾಡಲು ಅವಕಾಶ ಕೊಡುತ್ತೀರೋ ಇಲ್ಲವೋ? ಎಂಬ ಬಗ್ಗೆ ತೀರ್ಮಾನವಾಗಬೇಕು.

ಶ್ರೀ ಎಂ.ಸಿ. ನಾಣಯ್ಯ : ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಇನ್ನು ಕೆಲವು ಸದಸ್ಯರು ಇದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸಭಾಧ್ಯಕ್ಷರು ಬಿಸ್‌ನೆಸ್ ಅಡ್ವೈಸರಿ ಸಮಿತಿಯ ಸಭೆಯನ್ನು ಕರೆದು ಅಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಯಾವ ದಿನಗಳನ್ನು ಇದರ ಚರ್ಚೆಗಾಗಿ ನಿಗದಿ ಮಾಡಬೇಕು, ಯಾರ್ಯಾರು ಮಾತನಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡೋಣೆಂದು ನಿನ್ನೆ ಹೇಳಿದ್ದಾನೆ. ಈ ಹಿಂದೆ ಬಜೆಟ್ ಮತ್ತೆ ರಾಜ್ಯಪಾಲರ ಭಾಷಣ ಎರಡೂ ಒಟ್ಟೊಟ್ಟಿಗೆ ಬಂದಾಗ ಕೆಲಸ ನಡೆಯಿತ್ತು.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸಭಾಧ್ಯಕ್ಷರು ನಮಗೆ ಇಂದು ಚರ್ಚೆಗೆ ಅವಕಾಶ ಕೊಡುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಆದರೆ ಆ ಭರವಸೆ ಈಡೇರಲಿಲ್ಲ. ಇದರ ಬಗ್ಗೆ

ಚರ್ಚೆಮಾಡಲು 22ನೇ ತಾರೀಖಿನಿಂದ ಅವಕಾಶ ಕೊಡುವುದಾಗಿ ಸಂಸದೀಯ ವ್ಯವಹಾರಗಳ ಸಚಿವರು ಇಂದು ಹೇಳುತ್ತಿದ್ದಾರೆ . ಮಾನ್ಯ ಸಂಸದೀಯ ಸಚಿವರು ಮಾತನಾಡುತ್ತಾ ಕೊಡಗು ಹತ್ತಿ ಉರಿಯುತ್ತಿಲ್ಲವೆಂದು ಹೇಳಿದರು. ನನಗೆ ಇಲ್ಲಿ ಅದರ ಬಗ್ಗೆ ಪ್ರಸ್ತಾವ ಮಾಡಲು ಅವಕಾಶಕೊಟ್ಟಿದ್ದರೆ ಕೊಡಗು ಯಾವ ರೀತಿ ಉರಿಯುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೆ. ಆಗ ಅವರು ಉತ್ತರ ಕೊಡಲೂ ಸಾಧ್ಯವಾಗುತ್ತಿತ್ತು. ಆದರೆ ಯಾವ ಕಾರಣಕ್ಕಾಗಿ 22 ರಂದು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಹೇಳಿದರೋ ನನಗೆ ಗೊತ್ತಿಲ್ಲ. ಆದರೆ 22ರಂದು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಲೇ ಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರಗಳು

(5) ಪ್ರಶ್ನೋತ್ತರಗಳು

(ಅ) ಚುಕ್ಕಿ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ತಿಪಟೂರು ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾದ ಕಾಮಗಾರಿಗಳು.

73:(656)ಶ್ರೀ ಬಿ.ನಂಜಾಮರಿ (ತಿಪಟೂರು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ತಿಪಟೂರು ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯಲ್ಲಿ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು; (ಆಯವ್ಯಯದಲ್ಲಿ ಸೇರಿದ್ದು)

ಆ)ಇವುಗಳಲ್ಲಿ 1/3 ಭಾಗದಷ್ಟು ಹಣ ಒದಗಿಸಿರುವ ಕಾಮಗಾರಿಗಳು ಯಾವುವು ;ಇವುಗಳು ಎಂದಿನಿಂದ ಮಂಜೂರಾಗಿವೆ; ಇವುಗಳಲ್ಲಿ ಕೆಲಸ ಆರಂಭಿಸಿರುವ ಕಾಮಗಾರಿಗಳು ಯಾವುವು ;

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ)ಎರಡು ಕಾಮಗಾರಿಗಳು ಆಯವ್ಯಯದಲ್ಲಿಸೇರಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ)ಅನುದಾನ ಅಭಾದಿಂದ 1/3ನೇ ಭಾಗ ಹಣ ಯಾವ ಕಾಮಗಾರಿಗೂ ಒದಗಿಸಲಾಗಿಲ್ಲ

ಶ್ರೀ ಬಿ. ನಂಜಾಮರಿ : ಮಾನ್ಯ ಉಪಾಧ್ಯಕ್ಷರೆ, ತಿಪಟೂರು ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯಲ್ಲಿ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆಯ ಎಷ್ಟುಮತ್ತು ಅವು ಯಾವುವು ಎಂದು ಪ್ರಶ್ನೆ ಕೇಳಿದ್ದಕ್ಕೆ ಎರಡು ಕಾಮಗಾರಿಗಳು ಆಯವ್ಯಯದಲ್ಲಿ ಸೇರಿದೆ, ಅದರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ ಆದರೆ ನನಗೆ ಅದರ ಅನುಬಂದದ ಪ್ರತಿ ಬಂದಿಲ್ಲ. ಬೆಳಗ್ಗೆಯಿಂದ ಕೇಳುತ್ತಿದ್ದೇನೆ ಅವರು ಅದನ್ನು ಒದಗಿಸಿಕೊಡಲು ಆಗಿಲ್ಲ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಉಪಾಧ್ಯಕ್ಷರೆ ಆ ಅನುಬಂಧದ ಪ್ರತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ.